ಸಂಪುಟ: 14 Volume | ಸಂಚಿಕೆ: 80 Issue | ಪುಟಗಳು 08 Pages | ಬುಧವಾರ 01 ಜುಲೈ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಅನ್ಯರನ್ನು ಆಳು ಮಾಡದೆ, ತನ್ನ ತಾನಾಳಿದರೆ ಅದೇ ಬಿಡುಗಡೆ.

–ದ.ರಾ.ಬೇಂದ್ರೆ



ಬೆಂಗಳೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಚೇರಿಯಲ್ಲಿ ನೂತನ ಆಯುಕ್ತರಾದ ಅನಿಚೇತನ ಅವರನ್ನು ಭೇಟಿಯಾಗಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ದಿನಪತ್ರಿಕೆಗಳ ಸಂಘದ ರಾಜ್ಯ ಅಧ್ಯಕ್ಷರಾದ ಪದ್ಮ ನಾಗರಾಜ್, ಗೌರವಾಧ್ಯಕ್ಷರಾದ ಸಮತಾ. ಬಿ.ದೇಶಮಾನೆ, ಪ್ರಧಾನ ಕಾರ್ಯದರ್ಶಿ ಚನ್ನಬಸವ ಬಾಗಲವಾಡ, ಖಜಾಂಚಿ ಖಾನ್ ಸಾಬ್ ಮೋಮಿನ್ ಉಪಸ್ಥಿತರಿದ್ದರು.

## ಪತ್ನಿಗೆ ವಿದ್ಯುತ್ ಅವಘಡ ತಪ್ಪಿಸಲು ಹೋಗಿ ಮೃತಪಟ್ಟ ಪತಿ



**ಚಿಟಗುಪ್ಪ:** ತಾಲೂಕಿನ ನಾಗನಕೇರಾ ಗ್ರಾಮದ ನಬಿಸಾಬ್ ಹುಸೇನಸಾಬ್ ಶೇಕ್ (36) ಇವರ ಮನೆಗೆ ವಿದ್ಯುತ್ ಕಂಬದಿಂದ ಮೀಟ–ರಕ್ಕಾಗಿ ಅಳವಡಿಸಿರುವ ವಿದ್ಯುತ್ ತಂತಿ ರವಿವಾರ ಸುರಿದ ಗಾಳಿ, ಮಳೆಯಿಂದಾಗಿ ವಿದ್ಯುತ್ ತಂತಿ ಕೆಳಗೆ ಬಿದ್ದ ಪರಿಣಾಮ ಅಲ್ಲಿ ಬಟ್ಟೆ ಒಣಗಿಸುತ್ತಿದ್ದ ಇವರ ಪತ್ನಿಗೆ ವಿದ್ಯುತ್ ತಗುಲುತ್ತದೆ ಎಂಬ ಭಾವದಿಂದ ತಂತಿ ತೆಗೆಯಲು ಹೋಗಿ ವಿದ್ಯುತ್ ತಗಲಿ ಸ್ಥಳದಲ್ಲೇ ಮೃತಪಟ್ಟ ಘಟನೆ ಜರುಗಿದೆ. ಈ ಸಂಬಂಧ ಇವರ ಪತ್ನಿ ಫರಹತ ಬೇಗಂ ಮನ್ನಾಖೇಳ್ಳಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾಳೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪಂಚನಮೆ ಮಾಡಿಕೊಂಡು ಮರಣೋತ್ತರ ಪರೀಕ್ಷೆ ಮಾಡಿ ಬರ್ತಾರೆ. ಈ ಘಟನೆ ಕುರಿತು ಮನ್ನಾಖೇಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ರಾಜ್ಯಾದ್ಯಂತ ಇಂದಿನಿಂದ ಆರಂಭವಾಗಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಅಭಿಯಾನದ ಹಿನ್ನೆಲೆಯಲ್ಲಿ ಸಿಎಂ ಡಿ ಕೆ ಶಿವಕುಮಾರ್ ಅವರು ಸದಾಶಿವನಗರ ನಿವಾಸದಲ್ಲಿ ಅಧಿಕಾರಿಗಳಿಂದ ಗಣತಿ ನಮೂನೆ ಪಡೆದು ಭರ್ತಿ ಮಾಡುವ ಮೂಲಕ ಅಭಿಯಾನಕ್ಕೆ ಚಾಲನೆ, ಮತದಾರರಿಗೆ ಪ್ರೇರಣೆ ನೀಡಿದರು.



ಬೆಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸಿಎಂ ಡಿ ಕೆ ಶಿವಕುಮಾರ್ ಅವರು ಹೂಗುಚ್ಛ ನೀಡಿ, ಶಾಲು ಹೊದೆಸಿ ಆತ್ಮೀಯವಾಗಿ ಬರಮಾಡಿಕೊಂಡರು.

## ಹೆಂಡತಿಯ ಕೊಲೆ: ಅಪರಾಧಿಗೆ ಜೀವಾವಧಿ ಶಿಕ್ಷೆ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ತನ್ನ ಸ್ವಂತ ಹೆಂಡತಿಯನ್ನೇ ಕೊಲೆ ಮಾಡಿ, ಸಾಕ್ಷಿ ನಾಶಪಡಿಸಿ ಸುದೀರ್ಘ 10 ವರ್ಷಗಳಿಂದ ಕಾನೂನಿನ ಕಣ್ಣಿಗೆ ಮಣ್ಣೆರಚಿ ಪರಾರಿಯಾಗಿದ್ದ ಕುಖ್ಯಾತ ಅಪರಾಧಿಗೆ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಜೀವಾವಧಿ ಕಠಿಣ ಜೈಲು ಶಿಕ್ಷೆ ಹಾಗೂ ಒಂದು ಲಕ್ಷ ರೂಪಾಯಿ ನಗದು ದಂಡ ವಿಧಿಸಿ ಐತಿಹಾಸಿಕ ತೀರ್ಪು ನೀಡಿದೆ.



ಹೌದು 2016 ರಲ್ಲಿ ವಿಜಯಪುರದ ಜಲನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿತ್ತು. ಶಿವಶಕ್ತಿ ನಗರದ ನಿವಾಸಿಯಾದ ರಫೀಕ್ ದಸ್ತಗೀರಸಾಬ ಬಳಗಾನೂರ ಎಂಬಾತ ತನ್ನ ಹೆಂಡತಿಯನ್ನು ಕ್ರೂರವಾಗಿ ಕೊಲೆ ಮಾಡಿ, ಸಾಕ್ಷಿ ನಾಶಪಡಿಸಿದ್ದನು. ಈ ಕುರಿತು ಜಲನಗರ ಪೊಲೀಸ್ ಠಾಣೆಯಲ್ಲಿ ಕಲಂ 302, 201 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಾಗಿ ಘಟನೆ ನಡೆದ ಆರಂಭದಲ್ಲಿ ಬಂಧಿತನಾಗಿದ್ದ ಆರೋಪಿ ರಫೀಕ್, ನ್ಯಾಯಾಲಯದಿಂದ ಜಾಮೀನು ಪಡೆದು ಹೊರಬಂದಿದ್ದನು. ಆದರೆ ಜಾಮೀನಿನ ಮೇಲೆ ಮುಕ್ತನಾದ ಬಳಿಕ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದನು. ಆರೋಪಿ ಪತ್ತೆಯಾಗದ ಕಾರಣ ಸದರಿ ಪ್ರಕರಣವನ್ನು ಸುದೀರ್ಘ ಕಾಲದವರೆಗೆ ಐಕಖ ಪಟ್ಟಿಗೆ ಸೇರಿಸಲಾಗಿತ್ತು. ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಸಾಬೀತುಪಡಿಸಿದ ವಿಜಯಪುರ ಪೊಲೀಸರು, ಪ್ರಸ್ತುತ ವರ್ಷ ಅಂದರೆ 2026 ರ ಜನವರಿ ತಿಂಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ, ಅತ್ಯಂತ ಚಾಣಾಕ್ಷತನದಿಂದ ತಲೆಮರೆಸಿಕೊಂಡಿದ್ದ ರಫೀಕ್‌ನನ್ನು ಪತ್ತೆ ಹಚ್ಚಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದರು. ತದನಂತರ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಲಾಯಿತು.

## ಚಿತ್ರಕಲಾವಿದ ಕೆ.ಟಿ. ಶಿವಪ್ರಸಾದ್ ನಿಧನ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಅಂತರರಾಷ್ಟ್ರೀಯ ಖ್ಯಾತಿಯ ಚಿತ್ರಕಲಾವಿದ, ಪ್ರಗತಿಪರ ಚಿಂತಕ ಕೆ.ಟಿ. ಶಿವಪ್ರಸಾದ್ (79) ಅವರು ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ.



ಕಿಡ್ನಿ ಸಂಬಂಧಿತ ಸಮಸ್ಯೆಯಿಂದ ಬಳಲುತ್ತಿದ್ದ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇತ್ತೀಚೆಗೆ ಅವರು ದೀರ್ಘ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದರು.

ರೈತ ಹಾಗೂ ದಲಿತ ಚಳವಳಿಗಳೊಂದಿಗೆ ನಿಕಟವಾಗಿ ಗುರುತಿಸಿಕೊಂಡಿದ್ದ ಶಿವಪ್ರಸಾದ್ ಅವರು ತಮ್ಮ ಕಲೆಯ ಮೂಲಕ ಸಾಮಾಜಿಕ ಬದ್ಧತೆಯನ್ನು ಅಭಿವ್ಯಕ್ತಿಸಿದ ಅಪರೂಪದ ಕಲಾವಿದರಾಗಿದ್ದರು.

ಖ್ಯಾತ ಉದ್ಯಮಿ ಕಾರ್ಲೆ ಅವರ ಪುತ್ರರಾಗಿದ್ದ ಅವರು ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಆಪ್ತ ಸ್ನೇಹಿತರಾಗಿಯೂ ಪರಿಚಿತರಾಗಿದ್ದರು.

**ಸಂತಾಪ:** ಕೆ.ಟಿ. ಶಿವಪ್ರಸಾದ್ ಅವರ ನಿಧನಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. "ಕೆ.ಟಿ. ಶಿವಪ್ರಸಾದ್ ಅವರು ಕೇವಲ ಪ್ರತಿಭಾವಂತ ಚಿತ್ರಕಲಾವಿದರಷ್ಟೇ ಅಲ್ಲ, ಸಮಾಜಮುಖಿ ಚಿಂತನೆಗಳನ್ನು ತಮ್ಮ ಕಲೆಯ ಮೂಲಕ ಜನರಿಗೆ ತಲುಪಿಸಿದ ಅಪರೂಪದ ಸೃಜನಶೀಲ ವ್ಯಕ್ತಿತ್ವವಾಗಿದ್ದರು. ಅವರ ನಿಧನದಿಂದ ಕರ್ನಾಟಕದ ಸಾಂಸ್ಕೃತಿಕ ಮತ್ತು ಕಲಾ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಕುಟುಂಬದ ಸದಸ್ಯರು, ಬಂಧು–ಬಳಗ ಹಾಗೂ ಅಪಾರ ಅಭಿಮಾನಿಗಳಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ಕರುಣಿಸಲಿ. ಅಗಲಿದ ಆತ್ಮಕ್ಕೆ ಚಿರಶಾಂತಿ ದೊರೆಯಲಿ" ಎಂದು ಅವರು ಪ್ರಾರ್ಥಿಸಿದ್ದಾರೆ.

# ಕೈ–ಕಮಲ ಕಲಹ SIR

## ಎಸ್‌ಐಆರ್ ವಿಚಾರಕ್ಕೆ ಕಾಂಗ್ರೆಸ್–ಬಿಜೆಪಿ ನಡುವೆ ಚಕಮಕಿ | ಹಲವೆಡೆ ಎಸ್‌ಐಆರ್ ತಾಂತ್ರಿಕ ದೋಷ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು


ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆ ಇದೀಗ ಮತ್ತೆ ಸದ್ದು ಮಾಡತೊಡಗಿದೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಆರಂಭವಾಗುತ್ತಿದ್ದಂತೆಯೇ ರಾಜಕೀಯ ಪಕ್ಷಗಳ ನಡುವೆ ಜಟಾಪಟಿ ಆರಂಭವಾಗಿದೆ.

**ಏಜೆಂಟ್‌ಗಳ ನಡುವೆ ಕಲಹ:** ಬೆಂಗಳೂರಿನ ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಎಸ್‌ಐಆರ್ ಕಾರ್ಯದ ವೇಳೆ ಕಾಂಗ್ರೆಸ್ ಹಾಗೂ ಬಿಜೆಪಿ ಏಜೆಂಟ್‌ಗಳ ಮಧ್ಯೆ ಮಾತಿಗೆ ಮಾತು ಬೆಳೆದು ಚಕಮಕಿಗೆ ಕಾರಣವಾಗಿದೆ. ಇದರಿಂದ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

**ಕಾಂಗ್ರೆಸ್ ಮುಖಂಡರ ಆರೋಪ:** ಅಧಿಕಾರಿಗಳು ಎಸ್‌ಐಆರ್ ಕಾರ್ಯ ಆರಂಭಿಸುತ್ತಿದ್ದಂತೆ ಕಾಂಗ್ರೆಸ್ ಏಜೆಂಟ್‌ಗಳು ಕಾರ್ಯಾಚರಣೆಗೆ ಅಡ್ಡಿಪಡಿಸಿದರು. ಕಾಂಗ್ರೆಸ್ ಪಕ್ಷವನ್ನು ನಿರ್ಲಕ್ಷಿಸಿ ಬಿಜೆಪಿ ಪ್ರತಿನಿದಿಜತೆಗೆ ಮಾತ್ರ ಸಭೆ ನಡೆಸಲಾಗಿದೆ ಎಂದು ಕಾಂಗ್ರೆಸ್ ಮುಖಂಡರು ಆರೋಪಿಸಿದ್ದಾರೆ.

### ಉದ್ವಿಗ್ನ ವಾತಾವರಣ..!

ಎಸ್‌ಐಆರ್ ಕಾರ್ಯಕ್ಕೆ 31 ಬಿಎಲ್‌ಒಗಳು ಬರಬೇಕಿತ್ತು. 14 ಮಂದಿ ಬಂದಿದ್ದು, ಉಳಿದ ಸಿಬ್ಬಂದಿ ಬರುವವರೆಗೆ ಎಸ್‌ಐಆರ್ ಆರಂಭಿಸಲ್ಲ ಎಂದು ಕಾಂಗ್ರೆಸ್ ಏಜೆಂಟ್‌ಗಳು ಪಟ್ಟು ಹಿಡಿದಿದ್ದಾರೆ. ಬಿಜೆಪಿಯ 11 ಏಜೆಂಟ್‌ಗಳು ಆಗಮಿಸಿ, ಲಭ್ಯವಿರುವ ಸಿಬ್ಬಂದಿಯೊಂದಿಗೆ ಪ್ರಕ್ರಿಯೆ ಆರಂಭಿಸಬೇಕು ಎಂದು ಒತ್ತಾಯಿಸಿ ಪ್ರತಿಭಟಿಸಿದ್ದರಿಂದ ಚಕಮಕಿ ಉಂಟಾಗಿ ಉದ್ವಿಗ್ನತೆ ಸೃಷ್ಟಿಯಾಗಿತ್ತು.





ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ ಬಳಿಕ ಮತದಾರರ ಪಟ್ಟಿಗೆ ಸೇರದೇ ಇರುವವರಿಗೆ ಬಿಹಾರ, ಪಶ್ಚಿಮಬಂಗಾಳ ಸೇರಿದಂತೆ ಬೇರೆ ಬೇರೆ ರಾಜ್ಯಗಳಲ್ಲಿ ಗ್ಯಾರಂಟಿ ಯೋಜನೆಗಳು ಹಾಗೂ ಇತರ ಸರ್ಕಾರಿ ಸೌಲಭ್ಯಗಳನ್ನು ಸ್ಥಗಿತಗೊಳಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲೂ ಇದೇ ವ್ಯವಸ್ಥೆ ಬರುವ ಸಾಧ್ಯತೆ ಇದೆ .

–ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ.

### ಫಾರಂ ಭರ್ತಿಗೆ ಪರದಾಟ

ಅದೇ ರೀತಿ ನಗರದ ಇತರ ಕೆಲ ಪ್ರದೇಶಗಳಲ್ಲೂ ಎಸ್‌ಐಆರ್ ಆರಂಭದ ವೇಳೆ ಗದ್ದಲಗಳು ನಡೆದಿರುವುದಾಗಿ ಮೂಲ ತಿಳಿಸಿದೆ. ಮನೆ ಬಾಗಿಲಿಗೆ ಬಂದ ಬಿಎಲ್‌ಒಗಳು ನೀಡಿದ ಫಾರಂ ಭರ್ತಿ ಮಾಡಲು ಕೆಲವರು ಪರದಾಡಿದ್ದಾರೆ. ಜೊತೆಗೆ ರಾಜ್ಯದ ಇತರ ಕೆಲ ಭಾಗಗಳಲ್ಲೂ ಎಸ್‌ಐಆರ್ ಆರಂಭಕ್ಕೂ ಮುನ್ನ ತಾಂತ್ರಿಕ ದೋಷ ಕಂಡು ಬಂದಿವೆ ಎಂದು ವರದಿಯಾಗಿದೆ.



### ಎಸ್‌ಐಆರ್ ಸಿಬ್ಬಂದಿಯ ಗೊಂದಲ

ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಕಾರ್ಯಕರ್ತರ ನಡುವಿನ ಈ ಜಟಾಪಟಿಯಿಂದ ಎಸ್‌ಐಆರ್ ಸಿಬ್ಬಂದಿಗಳು ಗೊಂದಲಕ್ಕೀಡಾದರು. ಚಾಮರಾಜಪೇಟೆ ಕ್ಷೇತ್ರದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನಿಗದಿತ ಸಮಯಕ್ಕೆ ಆರಂಭವಾಗಲಿಲ್ಲ. ಆದರೆ, ಈ ವೇಳೆ ಮಧ್ಯ ಪ್ರವೇಶಿಸಿದ ಹಿರಿಯ ಅಧಿಕಾರಿಗಳು ಇದೇ ವೇಳೆ ಉಭಯ ಪಕ್ಷದವರನ್ನು ಸಮಾಧಾನಪಡಿಸಿ ಎಸ್‌ಐಆರ್ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ.

## ೬೦೦ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್ ವಿತರಣೆ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ 600 ವಿದ್ಯಾರ್ಥಿಗಳಿಗೆ ದಿವಂಗತ ಶ್ರೀರಾಮಪ್ಪ ಬಾಲಪ್ಪ ಬಿದರಿ ಹಾಗೂ ದಿವಂಗತ ಡಾ.ಸಿ ಆರ್ ಬಿದರಿ ಇವರ ಸ್ಮರಣಾರ್ಥ ಉಚಿತ ನೋಟು ಬುಕ್ಕ ವಿತರಣೆ ಕಾರ್ಯಕ್ರಮ ನಡೆಯಿತು.

ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆ ತಪ್ಪಿಸಿ ಅವರ ಶಿಕ್ಷಣಕ್ಕೆ ಪ್ರೋತ್ಸಾ ನೀಡುವ ನಿಟ್ಟಿನಲ್ಲಿ ಖ್ಯಾತ ವೈದ್ಯ ಡಾಕ್ಟರ್ ಆರ್ ಸಿ ಬಿದರಿ ಅವರು ಶಾಲಾ ಮಕ್ಕಳಿಗೆ ನೋಟ್ ಬುಕ್ ವಿತರಿಸಿದರು ಈ ವೇಳೆಯಲ್ಲಿ



ಸಂಸ್ಥೆಯ ಗೌರವಾಧ್ಯಕ್ಷರು ಎಚ್ ಆರ್ ಮಾಚಪ್ಪನವರ್ ಸಂಸ್ಥೆಯ ಅಧ್ಯಕ್ಷರಾದ ಸುರೇಶ ಸಿ ದೇಸಾಯಿ, ಕಾರ್ಯದರ್ಶಿಗಳು ಆರ್ ಪಿ ಕೊಡಬಾಗಿ, ವಕೀಲರು ಅಶೋಕ್ ಮಲಗಾಣ. ಎಸ್ ಎಲ್ ಜಿರಗಾಳ ವಕೀಲರು, ಶಿಕ್ಷಣ ಇಲಾಖೆಯ ಶ್ರೀಮತಿ ಪ್ರೇಮಾವತಿ ಹಿರೇಮಠ ಶಿಕ್ಷಣ ಸಂಯೋಜಕರು, ಎಮ್‌ಎಮ್ ಮುಲ್ಲಾ ಸಿ ಆರ್ ಸಿ. ಮುಖ್ಯ ಗುರುಗಳು ಹಾಗೂ ಶಾಲಾ ಶಿಕ್ಷಕ ಸಿಬ್ಬಂದಿ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಗ್ರಾಮಾಂತರ ಶಾಸಕರನ್ನು ಹುಡುಕಿ ಕೊಡಿ ಪ್ಲೀಸ್..!

• ಎಂ.ಜಂಬುನಾಥ, ಬಳ್ಳಾರಿ

ಬಳ್ಳಾರಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿ ಪೂಜೆ ಹಾಗೂ ಉದ್ಘಾಟನಾ ಕಾರ್ಯಕ್ರಮಗಳಲ್ಲಿ



ಕ್ಷೇತ್ರದ ಶಾಸಕರು ಸ್ವತಃ ಭಾಗವಹಿಸದೆ ಇರುವುದು ಚರ್ಚೆಗೆ ಗ್ರಾಸವಾಗಿದೆ. ತಮ್ಮ ಸಂಬಂಧಿಕರು ಹಾಗೂ ಆಪ್ತ ಕಾರ್ಯದರ್ಶಿಗಳನ್ನು ಕಳುಹಿಸುತ್ತಿದ್ದಾರೆ ಎಂಬ ಆರೋಪ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

**ಪಂಚಾಯಿತಿ ಫಜೀತಿ**

**ಅಸಮಾಧಾನಕ್ಕೆ ಕಾರಣ?:** ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ನಡೆಯುತ್ತಿರುವ ಸರ್ಕಾರಿ ಕಾಮಗಾರಿಗಳ ಭೂಮಿ ಪೂಜೆ ಕಾರ್ಯಕ್ರಮಗಳಲ್ಲಿ ಶಾಸಕರ ಬದಲಾಗಿ ಅವರ ಸಂಬಂಧಿಕರು ಹಾಗೂ ಆಪ್ತರು ಭಾಗವಹಿಸುತ್ತಿರುವುದು ಜನರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಸ್ಥಳೀಯರು ಹೇಳುತ್ತಿದ್ದಾರೆ. ಜನಪ್ರತಿನಿಧಿಗಳು ಸಾರ್ವಜನಿಕರೊಂದಿಗೆ ನೇರ ಸಂಪರ್ಕದಲ್ಲಿದ್ದು, ಅವರ ಸಮಸ್ಯೆಗಳನ್ನು ಆಲಿಸಬೇಕಾದ ಜವಾಬ್ದಾರಿ ಹೊಂದಿದ್ದರೂ, ಕ್ಷೇತ್ರದ ಜನರಿಗೆ ಶಾಸಕರನ್ನು ನೇರವಾಗಿ ಭೇಟಿ ಮಾಡುವ ಅವಕಾಶವೇ ಸಿಗುತ್ತಿಲ್ಲ ಎಂಬ ಅಸಮಾಧಾನ ವ್ಯಕ್ತವಾಗುತ್ತಿದೆ.

**ಯಾರನ್ನು ಸಂಪರ್ಕಿಸಬೇಕು?:** ಇನ್ನೊಂದು ಪ್ರಮುಖ ಆರೋಪವೆಂದರೆ, ಕ್ಷೇತ್ರದ ಬಹುತೇಕ ಜನರಿಗೆ ಶಾಸಕರ ಅಧಿಕೃತ ಮೊಬೈಲ್ ಸಂಖ್ಯೆ ಅಥವಾ ನೇರ ಸಂಪರ್ಕದ ಮಾಹಿತಿ ಲಭ್ಯವಿಲ್ಲ. ಸಮಸ್ಯೆಗಳನ್ನು ತಿಳಿಸಬೇಕಾದರೆ ಯಾರನ್ನು ಸಂಪರ್ಕಿಸಬೇಕು ಎಂಬ ಗೊಂದಲ ಸಾರ್ವಜನಿಕರಲ್ಲಿ ಇದೆ ಎನ್ನಲಾಗಿದೆ. "ಶಾಸಕರ ಕಚೇರಿಗೆ ಅಲೆದಾಡಿ ಅಲೆದಾಡಿ ಸುಸ್ತಾಗಿದ್ದೇವೆ. ಶಾಸಕರ ಫೋನ್ ನಂಬರ್ ಇಂದಿಗೂ ನಮಗೆ ಗೊತ್ತಿಲ್ಲ. ಜನರ ಸಮಸ್ಯೆ ಹೇಳಲು ಸರಿಯಾದ ಸಂಪರ್ಕ ವ್ಯವಸ್ಥೆಯೇ ಇಲ್ಲ" ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

### ಸಾರ್ವಜನಿಕರ ಆರೋಪವೇನು..?

ಸಾರ್ವಜನಿಕರ ಪ್ರಕಾರ, ಕುಡಿಯುವ ನೀರು, ರಸ್ತೆ, ಚರಂಡಿ, ವಿದ್ಯುತ್ ಸೇರಿದಂತೆ ಹಲವು ಮೂಲಭೂತ ಸಮಸ್ಯೆಗಳ ಬಗ್ಗೆ ಶಾಸಕರಿಗೆ ಮನವಿ ಸಲ್ಲಿಸಲು ಪ್ರಯತ್ನಿಸಿದರೂ, ಅವರನ್ನು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ. ಶಾಸಕರ ಕಚೇರಿಗೆ ಹಲವು ಬಾರಿ ತೆರಳಿದರೂ ಅವರು ಕಚೇರಿಯಲ್ಲಿ ಇರುವುದಿಲ್ಲ. ಕ್ಷೇತ್ರದಲ್ಲಿ ಭೇಟಿ ಮಾಡಲು ಹೋದರೂ ಶಾಸಕರು ಜನರ ನಡುವೆ ಕಾಣಿಸಿಕೊಳ್ಳುವುದಿಲ್ಲ ಎಂದು ಕೆಲವರು ಆರೋಪಿಸಿದ್ದಾರೆ.

### ಸಮಸ್ಯೆ ಆಲಿಸಲು ಶಾಸಕರೇ ಬರಲಿ..!

ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ನಾವು ಏನು ತಪ್ಪು ಮಾಡಿದ್ದೇವೆ? ಅಭಿವೃದ್ಧಿ ಕಾಮಗಾರಿಗಳ ವೇದಿಕೆಯಲ್ಲಿ ಶಾಸಕರ ಬದಲಾಗಿ ಸಂಬಂಧಿಕರು ಮತ್ತು ಆಪ್ತರು ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ ಜನರ ಸಮಸ್ಯೆಗಳನ್ನು ಆಲಿಸಲು ಶಾಸಕರು ಸ್ವತಃ ಮುಂದೆ ಬರಬೇಕು. ಜನರೊಂದಿಗೆ ನೇರ ಸಂವಾದ ನಡೆಸಿ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ವಂಚನೆ: 11.32 ಕೋಟಿ ರೂ. ಜಪ್ತಿ..!



• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ನಂದಿ ಸಕ್ಕರೆ ಕಾರ್ಖಾನೆಗೆ 12.33 ಕೋಟಿ ರೂ. ವಂಚಿಸಿದ ಅಂತರ್ ಜಿಲ್ಲಾ ಜಾಲವನ್ನು ಭೇದಿಸಿರುವ ಪೊಲೀಸರು, 8 ಜನ ಆರೋಪಿಗಳನ್ನು ಬಂಧಿಸಿ 11.32 ಕೋಟಿ ರೂ. ನಗದನ್ನು ಜಪ್ತಿ ಮಾಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದರು. ಹೌದು ನಗರದ ಜಿಲ್ಲಾ ಪೊಲೀಸ್ ಸಮುದಾಯದ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬಬಲೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯ ಕೃಷ್ಣಾನಗರದ 'ನಂದಿ ಸಕ್ಕರೆ ಕಾರ್ಖಾನೆ'ಯಲ್ಲಿ ಕಳೆದ 6 ವರ್ಷಗಳಿಂದ ರೈತರ ಹೆಸರಿನಲ್ಲಿ ಬೋಗಸ್ ಬಿಲ್ ಸೃಷ್ಟಿಸಿ ಕೋಟ್ಯಂತರ ರೂಪಾಯಿ ವಂಚಿಸುತ್ತಿದ್ದ ಜಾಲವನ್ನು ವಿಜಯಪುರ ಜಿಲ್ಲಾ ಪೊಲೀಸರು ಯಶಸ್ವಿಯಾಗಿ ಭೇದಿಸಿದ್ದಾರೆ. ಪ್ರಕರಣದ ಪ್ರಮುಖ ಸೂತ್ರಧಾರಿ ಸೇರಿದಂತೆ ಒಟ್ಟು 8 ಜನ ಆರೋಪಿಗಳನ್ನು ಬಂಧಿಸಲಾಗಿದ್ದು, ಅವರಿಂದ 11.32 ಕೋಟಿ ರೂ. ನಗದು ಹಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

**ರಾಮ ಮಂದಿರ ದೇಣಿಗೆ ಲೂಟಿ: BJP, RSSಗೆ, 'ಡೊನೇಷನ್ ಫಸ್ಟ್', 'ದೇಶ ನಂತರ': ಮೋದಿ ಮೌನ ಪ್ರಶ್ನಿಸಿದ ಪ್ರಿಯಾಂಕ್ ಖರ್ಗೆ**

## ಆಡಳಿತ ಚುರುಕಾಗಲಿ, ಸಾರ್ವಜನಿಕರ ಕೆಲಸಗಳು ಶೀಘ್ರವಾಗಲಿ

ಸರ್ಕಾರಿ ಕಚೇರಿಗಳು ಸಾರ್ವಜನಿಕರ ಸೇವೆಗಾಗಿ ಅಸ್ತಿತ್ವದಲ್ಲಿವೆ. ಜನರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಚೇರಿಗಳಿಗೆ ಬಂದಾಗ, ಅವರ ಅರ್ಜಿಗಳನ್ನು ಅನಗತ್ಯವಾಗಿ ವಿಳಂಬ ಮಾಡುವುದು ಅಥವಾ ಕಡತಗಳನ್ನು ತಿಂಗಳುಗಟ್ಟಲೆ ಬಾಕಿ ಇಡುವುದು ಉತ್ತಮ ಆಡಳಿತದ ಲಕ್ಷಣವಲ್ಲ.

## ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**

ಆಡಳಿತ ಯಂತ್ರ ಚುರುಕಾಗಿ ಕಾರ್ಯನಿರ್ವಹಿಸಿದರೆ ಜನರ ವಿಶ್ವಾಸ ಹೆಚ್ಚುತ್ತದೆ. ಜನಸಾಮಾನ್ಯರು ಸರ್ಕಾರಿ ಕಚೇರಿಗಳಿಗೆ ಪದೇ ಪದೇ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಬಾರದು. ಪ್ರತಿಯೊಂದು ಅರ್ಜಿಯನ್ನೂ ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡಿ, ಪಾರದರ್ಶಕ ಹಾಗೂ ಜವಾಬ್ದಾರಿಯುತ ಸೇವೆ ಒದಗಿಸುವುದು ಅಧಿಕಾರಿಗಳ ಕರ್ತವ್ಯವಾಗಿದೆ.

ಸರ್ಕಾರದ ಜನಪರ ಯೋಜನೆಗಳು ಜನರಿಗೆ ತಲುಪಬೇಕಾದರೆ ಆಡಳಿತದ ವೇಗ ಮತ್ತು ಕಾರ್ಯಕ್ಷಮತೆ ಅತ್ಯಂತ ಮುಖ್ಯ. ಅಧಿಕಾರಿಗಳು ಸೇವಾ ಮನೋಭಾವದಿಂದ ಕೆಲಸ ಮಾಡಿದರೆ ಜನರ ಸಂಕಷ್ಟ ಕಡಿಮೆಯಾಗುವುದಲ್ಲದೆ, ಆಡಳಿತದ ಮೇಲಿನ ಗೌರವವೂ ಹೆಚ್ಚುತ್ತದೆ.

ಆದ್ದರಿಂದ ರಾಜ್ಯದ ಎಲ್ಲಾ ಇಲಾಖೆಗಳ ಆಡಳಿತ ಇನ್ನಷ್ಟು ಚುರುಕುಗೊಂಡು, ಸಾರ್ವಜನಿಕರ ಕೆಲಸಗಳನ್ನು ವಿಳಂಬವಿಲ್ಲದೆ ಶೀಘ್ರವಾಗಿ ಪೂರ್ಣಗೊಳಿಸುವ ಮೂಲಕ ಜನಸ್ನೇಹಿ ಆಡಳಿತಕ್ಕೆ ಆದ್ಯತೆ ನೀಡಬೇಕಾಗಿದೆ.

## ಸಾರಿಗೆ ಇಲಾಖೆಯ ಹಳೇ ಪ್ರಕರಣಗಳ ದಂಡಕ್ಕೆ ಶೇ. 50 ವಿನಾಯಿತಿ; ಸದುಪಯೋಗಕ್ಕೆ ನ್ಯಾಯಾಧೀಶ ಉಪಾಧ್ಯೆ ಕರೆ




**ಬೀದರ್:** ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಪ್ರಾದೇಶಿಕ ಸಾರಿಗೆ ಇಲಾಖೆಯ (RTO) ಜಂಟಿ ಆಶ್ರಯದಲ್ಲಿ ನಗರದ ಪ್ರಧಾನ ನಗರದಲ್ಲಿರುವ ಸಾರಿಗೆ ಕಚೇರಿಯಲ್ಲಿ ಮಂಗಳವಾರ 'ಕಾನೂನು ಅರಿವು ಮತ್ತು ನೆರವು' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ರಾಘವೇಂದ್ರ ಉಪಾಧ್ಯೆ ಅವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ನ್ಯಾಯಾಧೀಶರು, "ಸಾರಿಗೆ ಇಲಾಖೆಯಲ್ಲಿ 1991ರ ಏಪ್ರಿಲ್ 1 ರಿಂದ 2022ರ ಮಾರ್ಚ್ 31ರ ವರೆಗಿನ ಅವಧಿಯಲ್ಲಿ ದಾಖಲಾಗಿರುವ ವಿವಿಧ ಇಲಾಖಾ ಪ್ರಕರಣಗಳ ದಂಡದ ಮೊತ್ತದ ಮೇಲೆ ಸರ್ಕಾರ ಶೇಕಡಾ 50 ರಷ್ಟು ಭರ್ಜರಿ ವಿನಾಯಿತಿ ನೀಡಿದೆ. ಸಾರ್ವಜನಿಕರು ಜೂನ್ 21 ರಿಂದ ಜುಲೈ 10ರ ಒಳಗಾಗಿ ಬಾಕಿ ದಂಡ ಪಾವತಿಸಿದರೆ ಮಾತ್ರ ಈ ವಿನಾಯಿತಿ ಸಿಗಲಿದೆ. ಆ ಬಳಿಕ ಪೂರ್ಣ ಪ್ರಮಾಣದ (ಶೇ. 100) ದಂಡ ತೆರಬೇಕಾಗುತ್ತದೆ," ಎಂದು ಎಚ್ಚರಿಸಿದರು.

"ಈ ವಿನಾಯಿತಿಯಿಂದ ಸರ್ಕಾರಕ್ಕೆ ಆರ್ಥಿಕ ನಷ್ಟವಾಗಲಿದ್ದರೂ, ಸಾರ್ವಜನಿಕರಿಗೆ ದಂಡದ ಹೊರೆ ಭಾರವಾಗಬಾರದು ಎಂಬ ಉದಾತ್ತ ಉದ್ದೇಶದಿಂದ ಈ ಸೌಲಭ್ಯ ನೀಡಲಾಗಿದೆ. ಆದರೆ, ಈ ಬಗ್ಗೆ ವ್ಯಾಪಕ ಅರಿವು ಮೂಡಿಸಿದರೂ ಜನರಿಂದ ನಿರೀಕ್ಷಿತ ಸ್ಪಂದನೆ ಸಿಗುತ್ತಿಲ್ಲ. ದಂಡ ಕಟ್ಟದಿದ್ದರೆ ಯಾರೂ ಏನೂ ಮಾಡಲಾರರು ಎಂಬ ನಿಷ್ಕಾಳಜಿಯ ಮನೋಭಾವನೆ ಬೇಡ. ಸಾರ್ವಜನಿಕರು ಜವಾಬ್ದಾರಿಯಿಂದ ಈ ರಿಯಾಯಿತಿಯ ಲಾಭ ಪಡೆದುಕೊಳ್ಳಬೇಕು," ಎಂದು ಅವರು ಸಲಹೆ ನೀಡಿದರು.

ರಸ್ತೆ ನಿಯಮ ಜೀವಕ್ಕೆ ರಕ್ಷೆ: "ಪ್ರತಿಯೊಬ್ಬರಿಗೂ ರಸ್ತೆಯಲ್ಲಿ ಸಂಚರಿಸುವುದು ಅನಿವಾರ್ಯ. ಆದರೆ ನಿಯಮಗಳ ಪಾಲನೆಯೊಂದಿಗೆ ಸಂಚರಿಸಿದಾಗ ನಮ್ಮ ಜೀವದ ಜೊತೆಗೆ ಇತರರ ಜೀವಕ್ಕೂ ರಕ್ಷಣೆ ಸಿಗುತ್ತದೆ. ಗೊತ್ತಿದ್ದೋ, ಗೊತ್ತಿಲ್ಲದೋ ಮಾಡುವ ತಪ್ಪಿಗೆ ದಂಡ ವಿಧಿಸುವುದು ಜನರಿಗೆ ಶಿಕ್ಷೆ ನೀಡುವುದಕ್ಕಲ್ಲ, ಬದಲಿಗೆ ಅವರಿಂದ ಒಂದು ಒಳ್ಳೆಯ ಪಾಠ ಕಲಿಯಲಿ ಎಂಬ ಉದ್ದೇಶಕ್ಕಾಗಿ," ಎಂದು ತಿಳಿಸಿದರು.

ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿ (RTO) ಮುಹಮ್ಮದ್ ಜಾಫರ್ ಸಾದಿಕ್ ಮಾತನಾಡಿ, "ರಾಜ್ಯ ಸರ್ಕಾರ ನೀಡಿರುವ ಈ ವಿನಾಯಿತಿಯು ಕೇವಲ ಬಾಕಿ ಇರುವ ದಂಡದ ಮೊತ್ತಕ್ಕೆ ಮಾತ್ರ ಅನ್ವಯಿಸುತ್ತದೆ, ವಾಹನ ತೆರಿಗೆಯ ಮೇಲಲ್ಲ ಎಂಬುದನ್ನು ಸಾರ್ವಜನಿಕರು ಗಮನಿಸಬೇಕು. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಹಾಗೂ ಕಾರು ಚಾಲಕರು ಸೀಟ್ ಬೆಲ್ಟ್ ಹಾಕಬೇಕು. ಸುರಕ್ಷತಾ ನಿಯಮಗಳ ಪಾಲನೆಯಿಂದ ದೊಡ್ಡ ಅನಾಹುತಗಳನ್ನು ತಪ್ಪಿಸಬಹುದು," ಎಂದರು.

ಈ ಸಂದರ್ಭದಲ್ಲಿ ಮೋಟಾರು ವಾಹನ ನಿರೀಕ್ಷಕ ಪ್ರಕಾಶ್ ಎಚ್. ಉಳ್ಳೆ, ರವಿಶಂಕರ್ ನಾಗರಾಣಾ, ಮಹೇಶ್‌ಕುಮಾರ್ ಮೆಣಸಿನಕಾಯಿ, ಕಚೇರಿ ಅಧೀಕ್ಷಕ ಮಲ್ಲಿಕಾರ್ಜುನ ಎಂ., ಪ್ರೇಮಕುಮಾರ್ ಎಲಗುರ್ತಿ, ಗುರುಪ್ರಸಾದ್ ಗುಳೇದಗುಡ್ಡ, ಸುನಿಲ್ ಬಗಲಿ, ಅನಮುನ್ ಸೆಕ್ಸೇನಾ, ಸೈಯದ್ ಕಲೀಂ, ಅಂಬಿಕಾ ಹಾಗೂ ಭಾಗ್ಯವಂತಿ ಮೋಟಾರು ಡ್ರೈವಿಂಗ್ ಸ್ಕೂಲ್ ಪ್ರಾಚಾರ್ಯ ಶಿವರಾಜ್ ಜಮಾದಾರ್ ಉಪಸ್ಥಿತರಿದ್ದರು.

## ಡ್ರಗ್ಸ್ ಜಾಲಕ್ಕೆ ಬ್ರೇಕ್ ಹಾಕಲು ಸಾರ್ವಜನಿಕರ ಸಹಕಾರ ಅಗತ್ಯ

• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**



ತಾಲೂಕಿನ ಗ್ರಾಮೀಣ ಭಾಗಗಳಲ್ಲಿ ವ್ಯಾಪಕವಾಗಿ ಹರಡುತ್ತಿರುವ ಡ್ರಗ್ಸ್ ಮತ್ತು ಮಾದಕ ದ್ರವ್ಯ ಜಾಲಕ್ಕೆ ಕಡಿವಾಣ ಹಾಕಲು ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಕೈಜೋಡಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಕ್ಷಿ ಕರೆ ನೀಡಿದ್ದಾರೆ.

ಈ ಕುರಿತು ನಗರದ ಶಹಾರ ಪೊಲೀಸ್ ಠಾಣೆಯಲ್ಲಿ ಹಮ್ಮಿಕೊಂಡಿದ್ದ ದಲಿತ ಸಭೆಯಲ್ಲಿ ಅವರು ಮಾತನಾಡಿ, ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಡ್ರಗ್ಸ್ ಮಾರಾಟ ಮತ್ತು ಸೇವನೆ ಹೆಚ್ಚಾಗಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ. ಇದನ್ನು ಬುಡಸಮೇತ ಕಿತ್ತೊಗೆಯಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಈಗಾಗಲೇ ಕಳೆದ ಐದು ದಿನಗಳ ಅಂತರದಲ್ಲಿ ಎರಡು ಪ್ರತ್ಯೇಕ ಡ್ರಗ್ಸ್ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ತಿಳಿಸಿದರು.

ಡ್ರಗ್ಸ್ ಜಾಲದ ವಿರುದ್ಧದ ಹೋರಾಟವನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಪೊಲೀಸ್ ಇಲಾಖೆಯು 'ಕ್ಯೂಆರ್ ಕೋಡ್' ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಸಾರ್ವಜನಿಕರು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ತಮ್ಮ ವ್ಯಾಪ್ತಿಯಲ್ಲಿ ನಡೆಯುವ ಅನುಮಾನಾಸ್ಪದ ಚಟುವಟಿಕೆಗಳ ಬಗ್ಗೆ ನಿಖರ ಮಾಹಿತಿ ನೀಡಬಹುದು. ಮಾಹಿತಿ ನೀಡುವವರ ಹೆಸರು ಮತ್ತು ವಿವರಗಳನ್ನು ಸಂಪೂರ್ಣ ಗೌಪ್ಯವಾಗಿಡಲಾಗುವುದು ಎಂದು ಎಸ್‌ಪಿ ಭರವಸೆ ನೀಡಿದರು.

ತಾಲೂಕಿನ ಅಂಬಾಮಠ, ಆರ್‌ಎಚ್ ನಂ. 2, 3, 4 ಮತ್ತು 5ರ ಗಾಂಜಾ ಮಾರಾಟ ನಡೆಯುತ್ತಿರುವ ಕುರಿತು ದೂರುಗಳು ಕೇಳಿಬಂದಿವೆ. ಈ ಪ್ರದೇಶಗಳಲ್ಲಿ ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆ ಬಗ್ಗೆ ಸಾರ್ವಜನಿಕರು ಎಚ್ಚೆತ್ತುಕೊಳ್ಳಬೇಕು. ತಮ್ಮ ಮಕ್ಕಳ ಮೇಲೆ ನಿಗಾ ಇರಿಸುವಂತೆ ಪೋಷಕರಿಗೆ ಕಿವಿಮಾತು ಹೇಳಿದ ಅವರು, ಯುವ ಸಮುದಾಯ ಮಾದಕ ದ್ರವ್ಯದ ದಾಸರಾಗದಂತೆ ಎಚ್ಚರ ವಹಿಸಬೇಕು ಎಂದು ಮನವಿ ಮಾಡಿದರು.

ಗ್ರಾಮೀಣ ಭಾಗಗಳಲ್ಲಿ ಮಾದಕ ದ್ರವ್ಯ ಮುಕ್ತ ವಾತಾವರಣ ನಿರ್ಮಿಸಲು ಸಾರ್ವಜನಿಕರ ಸಹಕಾರವೇ ಪ್ರಮುಖ ಅಸ್ತ್ರವಾಗಿದೆ. ಅಪರಾಧ ಚಟುವಟಿಕೆಗಳ ಬಗ್ಗೆ ಮಾಹಿತಿ ಸಿಕ್ಕ ತಕ್ಷಣ ಪೊಲೀಸರಿಗೆ ತಿಳಿಸುವ ಮೂಲಕ ಜವಾಬ್ದಾರಿಯುತ ಪ್ರಜೆಯಾಗಿ ಕರ್ತವ್ಯ ನಿರ್ವಹಿಸುವಂತೆ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಡಿವೈಎಸ್ಪಿ ಜಿ.ಚಂದ್ರಶೇಖರ, ಸಿಪಿಐ ವಿನಾಯಕ್, ಪಿಐ ವಿರಾರೆಡ್ಡಿ, ದಲಿತ ಮುಖಂಡರಾದ ಹೆಚ್ ಎನ್ ಬಡಿಗೇರ್, ಅಶೋಕ್ ಉಮಲೂಟಿ, ಹನುಮಂತ ಗೋಮರ್ಸಿ, ಹನುಮಂತ ಕರ್ನಿ, ನಿರುಪಾದಿ ಸಾಸಲಮರಿ ಕ್ಯಾಂಪ್, ಬಿಎಸ್ಪಿ ಮರಿಯಪ್ಪ, ಚಿಟ್ಟಿಬಾಬು, ಲಕ್ಷ್ಮಣ ಬೋವಿ, ದುರ್ಗೇಶ್ ಬಾಲಿ, ಮೌನೇಶ ಜಾಲಿವಾಡಗಿ, ಪಂಪಾಪತಿ, ಬಸವರಾಜ ನಾಯಕ ವಕೀಲರು, ಮೌನೇಶ ನಾಯಕ ಏಳುರಾಗಿ ಸೇರಿದಂತೆ ಇತರರು ಇದ್ದರು.

## ಅಭಿವೃದ್ಧಿ ಮಂಡಳಿ ಸ್ಥಾಪನೆಗೆ ಮನವಿ

• **ಮಲ್ಲಮ್ಮ ನುಡಿ ವಾರ್ತೆ ಜೇವರ್ಗಿ**

ಕರ್ನಾಟಕದಲ್ಲಿ ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ರಜಪೂತ ಸಮಾಜದ ಏಳಿಗೆಗಾಗಿ ತಕ್ಷಣವೇ ರಜಪೂತ ಅಭಿವೃದ್ಧಿ ಮಂಡಳಿ ಸ್ಥಾಪಿಸಲು ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಒತ್ತಾಯಿಸಿ ಜೇವರ್ಗಿ ತಾಲೂಕಿನ ರಜಪೂತ ಸಮಾಜದ ಪದಾಧಿಕಾರಿಗಳು ಹಾಗೂ ಬಂಧುಗಳು ತಾಲೂಕು ಆಡಳಿತದ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರಿಗೆ ಮತ್ತು ಹಿಂದುಳಿದ ವರ್ಗಗಳ ಆಯೋಗಕ್ಕೆ ತುರ್ತು ಶಿಫಾರಸು ಪತ್ರ ರವಾನಿಸುವಂತೆ ಮನವಿ ಸಲ್ಲಿಸಿದರು.

ನಮ್ಮ ಸಮಾಜವು ಮುಖ್ಯ ವಾಹಿನಿಯಿಂದ ದೂರ ಉಳಿದ ಸಮಾಜ ರಾಜ್ಯದಲ್ಲಿ ಲಕ್ಷಾಂತರ ಜನಸಂಖ್ಯೆ ಹೊಂದಿರುವ ರಜಪೂತ ಸಮಾಜವು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ಉದ್ಯೋಗದ ರಂಗದಲ್ಲಿ ತೀವ್ರವಾಗಿ ಹಿಂದುಳಿದಿದೆ.



ಯುವಪೀಳಿಗೆಗೆ ಸೂಕ್ತ ಪ್ರೋತ್ಸಾಹ ಮತ್ತು ಮಾರ್ಗದರ್ಶನ ಸಿಗದೆ ಸಮಾಜವು ಇಂದಿಗೂ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತಿಲ್ಲ ಎಂದು ಮನವಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

**ದತ್ತಾಂಶ ಸಲ್ಲಿಕೆ:** ಈಗಾಗಲೇ ಕಲಬುರಗಿ ಜಿಲ್ಲಾಡಳಿತದ ಉಸ್ತುವಾರಿಯಲ್ಲಿ ರಜಪೂತ ಸಮಾಜದ ಕೌಟುಂಬಿಕ ಸಮೀಕ್ಷೆ ಹಾಗೂ ಡಿಜಿಟಲ್ ನೋಂದಣಿ ಪ್ರಕ್ರಿಯೆ ಅತ್ಯಂತ ಯಶಸ್ವಿಯಾಗಿ ನಡೆದಿದ್ದು, ಸದರಿ ಸಮಗ್ರ ದತ್ತಾಂಶಗಳ (Data) ವರದಿಯು ಬೆಂಗಳೂರಿನಲ್ಲಿರುವ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಆಯೋಗದ ಪರಿಶೀಲನೆಯಲ್ಲಿದೆ.

## ತಾಲೂಕ ಘಟಕದ ಅಧ್ಯಕ್ಷರಾಗಿ ನೇಮಕ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ನಮ್ಮ ಕರ್ನಾಟಕ ಸೇನೆ ರಾಜ್ಯಾಧ್ಯಕ್ಷ ಬಸವರಾಜ ಪಡಕೋಟೆ ಅವರು ಜಿಲ್ಲೆಯ ಸಾಮಾಜಿಕ ಹಾಗೂ ಸಂಘಟನಾ ಚಟುವಟಿಕೆಗಳನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಸುಮಿತ್ ನಾಗೋರೆ ಅವರನ್ನು ನಮ್ಮ ಕರ್ನಾಟಕ ಸೇನೆಯ ಬೀದರ್ ತಾಲೂಕ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ನೇಮಕಾತಿ ಆದೇಶದಲ್ಲಿ, ಸಂಘಟನೆಯ ತತ್ವ, ಉದ್ದೇಶ ಹಾಗೂ ನಿಯಮಾವಳಿಗಳಿಗೆ ಬದ್ಧರಾಗಿ ಕಾರ್ಯನಿರ್ವಹಿಸುವ ಮೂಲಕ ಸಂಘಟನೆಯನ್ನು ಬಲಪಡಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಸೂಚಿಸಲಾಗಿದೆ. ಜಿಲ್ಲೆಯಾದ್ಯಂತ ಸಂಘಟನೆಯನ್ನು ವಿಸ್ತರಿಸಿ, ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಕನ್ನಡಪರ ಹಾಗೂ ಜನಪರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ತಿಳಿಸಲಾಗಿದೆ.



ಹೊಸ ಜವಾಬ್ದಾರಿ ನೀಡಿರುವುದಕ್ಕೆ ರಾಜ್ಯಾಧ್ಯಕ್ಷ ಬಸವರಾಜ ಪಡಕೋಟೆ ಹಾಗೂ ಸಂಘಟನೆಯ ಹಿರಿಯ ಮುಖಂಡರಿಗೆ ಸುಮಿತ್ ನಾಗುರೆ ಅವರು ಕೃತಜ್ಞತೆ ಸಲ್ಲಿಸಿದ್ದು, ಸಂಘಟನೆಯ ಆಶಯಗಳಿಗೆ ಅನುಗುಣವಾಗಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವುದಾಗಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಜಿ ಜಿಲ್ಲಾಧ್ಯಕ್ಷ ಗಣೇಶ್ ಪಾಟೀಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ವೇತನದ ಆದಾಯ ಮಿತಿ 1.20ಲಕ್ಷ ರೂ.ಗೆ ಹೆಚ್ಚಿಸಲು ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಅಂಗವಿಕಲರು, ವಿಧವೆಯರು ಹಾಗೂ ವೃದ್ಧರ ಮಾಸಾಶನ ಪಡೆಯಲು ಇರುವ ಆದಾಯ ಮಿತಿಯನ್ನು 1,20,000 ರೂಪಾಯಿಗಳಿಗೆ ಹೆಚ್ಚಿಸಬೇಕು ಹಾಗೂ ಪ್ರತ್ಯೇಕ 'ಅಂಗವಿಕಲರ ಅಭಿವೃದ್ಧಿ ನಿಗಮ' ಸ್ಥಾಪಿಸಬೇಕು ಎಂದು ಆಗ್ರಹಿಸಿ 'ಕರ್ನಾಟಕ ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ನಿಗ್ರಹ ಸಮಿತಿ'ಯು ಸೋಮವಾರ ಬೀದರ್ ತಹಸೀಲ್ದಾರ್ ರವೀಂದ್ರ ದಾಮಾ ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ರಾಜ್ಯ ಸರ್ಕಾರವು ಮಾಸಾಶನ ಪಡೆಯಲು 32,000 ರೂ.ಗಳ ಆದಾಯ ಮಿತಿಯನ್ನು ನಿಗದಿಪಡಿಸಿ ಆದೇಶ ಹೊರಡಿಸಿರುವುದರಿಂದ ಲಕ್ಷಾಂತರ ಫಲಾನುಭವಿಗಳಿಗೆ ತೀವ್ರ ತೊಂದರೆಯಾಗಿದೆ. ಈ ದಿಢೀರ್ ಆದೇಶದಿಂದಾಗಿ ಬಿಪಿ, ಶುಗರ್‌ನಂತಹ ಕಾಯಿಲೆಗಳಿಗೆ ಔಷಧಿ



ಖರೀದಿಸಲು ಹಾಗೂ ದೈನಂದಿನ ಜೀವನ ಸಾಗಿಸಲು ಸಂಪೂರ್ಣವಾಗಿ ಮಾಸಾಶನವನ್ನೇ ಅವಲಂಬಿಸಿದ್ದ ವೃದ್ಧರು, ವಿಧವೆಯರು ಮತ್ತು ಅಂಗವಿಕಲರು ಪರದಾಡುವಂತಾಗಿದೆ. ಕಚೇರಿಯಿಂದ ಮನೆಗೆ, ಮನೆಯಿಂದ ಕಚೇರಿಗಳಿಗೆ ಅಲೆಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಮಿತಿ ಕಳವಳ ವ್ಯಕ್ತಪಡಿಸಿದೆ. ಆದ್ದರಿಂದ, ಸರ್ಕಾರ ಕೂಡಲೇ 32 ಸಾವಿರ ರೂ. ಆದಾಯ ಮಿತಿಯ ಆದೇಶವನ್ನು ರದ್ದುಗೊಳಿಸಿ, ಅದನ್ನು 1,20,000 ರೂ.ಗಳಿಗೆ ಹೆಚ್ಚಿಸಬೇಕು. ಇದರಿಂದ ನಿಜವಾದ ಅರ್ಹ ಫಲಾನುಭವಿಗಳಿಗೆ ಅನುಕೂಲವಾಗಲಿದೆ. ಇದರೊಂದಿಗೆ ರಾಜ್ಯ ಹಾಗೂ ಪ್ರತಿ ಜಿಲ್ಲಾ ಮಟ್ಟದಲ್ಲಿ 'ಅಂಗವಿಕಲರ ಅಭಿವೃದ್ಧಿ ನಿಗಮ'ವನ್ನು ಸ್ಥಾಪಿಸಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ. ಸಮಿತಿಯ ಈ ಮನವಿಯನ್ನು ಬೀದರ್ ತಹಸೀಲ್ದಾರ್ ಅವರ ಮುಖಾಂತರ ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ.ಜಿ.ಪರಮೇಶ್ವರ ಅವರಿಗೆ ರವಾನಿಸಲಾಗಿದೆ.

ಸಮಿತಿಯ ಕಲ್ಯಾಣ ಕರ್ನಾಟಕ ಕಲಬುರಗಿ ವಿಭಾಗದ ಅಧ್ಯಕ್ಷರಾದ ಸಂಗಮೇಶ ಭಾವಿದೊಡ್ಡಿ, ಅಂಗವಿಕಲ ಘಟಕದ ರಾಜ್ಯಾಧ್ಯಕ್ಷೆ ಮಂಗಲಾ ಮರ್ಕಲೆ, ಜಿಲ್ಲಾ ಕಾರ್ಯಾಧ್ಯಕ್ಷ ಶಿವಕುಮಾರ ಶಹಾಪೂರೆ, ಜಿಲ್ಲಾ ಕಾರ್ಯದರ್ಶಿ ಎಂ.ಡಿ. ಸಿರಾಜ್ ಹಾಗೂ ಸದಸ್ಯರುಗಳಾದ ಶ್ರೀಕಾಂತ ಡೋಣೆ, ಕವಿತಾ ಡೋಣೆ, ಜಗದೇವಿ, ವೀರಶೆಟ್ಟಿ ಕೌಡಗೆ, ಬೀರಗೊಂಡ, ಮತ್ತು ರಂಗಮ್ಮ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ರಾಜ್ಯಾದ್ಯಂತ 'ಕಾಂಗ್ರೆಸ್ ಹಟಾವೊ, ತಾಂಡಾ ಬಚಾವ್' ಅಭಿಯಾನ



• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ರಾಜ್ಯದ ಪ್ರತಿ ಹಳ್ಳಿಗೂ, ಜಿಲ್ಲೆಗೂ ಸೇರಿ ಇಡೀ ರಾಜ್ಯಾದ್ಯಂತ 'ಕಾಂಗ್ರೆಸ್ ಹಟಾವೊ, ತಾಂಡಾ ಬಚಾವ', ಎಂಬ ಅಭಿಯಾನ ಹಮ್ಮಿಕೊಳ್ಳಲಾಗುವುದೆಂದು ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಹಿಂದೆ ನಮ್ಮ ಸರ್ಕಾರವಿದ್ದಾಗ. ಮಾಧುಸ್ವಾಮಿ ಅವರ ವರದಿ ಪ್ರಕಾರ ಪರಿಶಿಷ್ಟರಿಗೆ ಶೇಕಡಾ 17 ಪ್ರತಿಶತದಷ್ಟು ಮೀಸಲಾತಿ ನೀಡಲು ಶಿಫಾರಸ್ಸು ಮಾಡಿದ್ದರು. ಅದರಲ್ಲಿ ನಮ್ಮ ಸಮಾಜಕ್ಕೆ 4.5 ಪ್ರತಿಶತದಷ್ಟು ಲಮಾಣಿ, ಕೊರವ, ಕೊರಚ, ಭೋವಿ ವಡ್ಡರ್ ಜಾತಿಗಳಿಗೆ ಮೀಸಲಾತಿ ನೀಡಲು ತಿಳಿಸಿದರು. ಆದರೆ ಬಿಜೆಪಿ ಸರ್ಕಾರ ನಮ್ಮ ಜಾತಿಗೆ ಅವಮಾನ ಮಾಡಿದೆ ಎಂದು ರಾಜ್ಯದಲ್ಲಿ ಸುಳ್ಳು ಸುದ್ದಿ ಹಬ್ಬಿಸಿ ಬಿಜೆಪಿ ಹಟಾವೊ, ತಾಂಡಾ ಬಚಾವ ಎಂದು ಅಪಪ್ರಚಾರ ಮಾಡಿ ಬಿಜೆಪಿ ಪಕ್ಷ ಸೋಲಲ್ಲು ಕಾರಣವಾಯಿತು. ಇದರಿಂದ ನಾವು ಅಧಿಕಾರದಿಂದ ವಂಚಿತರಾಗಲು ಕಾರಣವಾಗಿದೆ. ಸರ್ವೋಚ್ಛ ನ್ಯಾಯಾಲಯದ ಆದೇಶದ ಪ್ರಕಾರ ಕಾಂಗ್ರೆಸ್ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ನಮ್ಮ ಸಮಾಜಕ್ಕೆ ಸುಳ್ಳು ಆಮೀಶ ತೋರಿಸಿ ಮೋಸ ಮಾಡಿದೆ. ಹೇಳಿದೊಂದು ಮಾಡಿರುವುದು ಮತ್ತೊಂದು ಎಂಬಂತೆ, 17 ಪ್ರತಿಶತ ಇದ್ದ ಮೀಸಲಾತಿ 15 ಪ್ರತಿಶತಕ್ಕೆ ಇಳಿಸಿ, ಸಿ ಕೆಟಗೆರಿಯಲ್ಲಿದ್ದ 4 ಜಾತಿಗಳ ಪಟ್ಟಿಗೆ 59 ಇತರೆ ಜಾತಿಗಳನ್ನು ಸೇರಿಸಿ ಒಳ ಮೀಸಲಾತಿಯಲ್ಲಿ ಮತ್ತೆ ಅದರಲ್ಲೂ ಒಳ ಮೀಸಲಾತಿ ಮಾಡಿ ನಮ್ಮ ಸಮಾಜಕ್ಕೆ ಅನ್ಯಾಯ ಮಾಡಿರುವ ಕಾಂಗ್ರೆಸ್ ಸರ್ಕಾರದ ವಿರೂದ್ಧ ನಮ್ಮ ಸಮಾಜ ದಂಗೆ ಏಳಬೇಕಾಗಿದೆ ಎಂದರು.

ಮಾಜಿ ಸಚಿವರು ಹಾಗೂ ಔರಾದ್ ಮೀಸಲು ಕ್ಷೇತ್ರದ ಶಾಸಕ ಪ್ರಭು ಚವ್ಹಾಣ ಮಾತನಾಡಿ, ನಮ್ಮ ಜಿಲ್ಲೆಯಲ್ಲಿ ಒಟ್ಟು 300 ತಾಂಡಾಗಳಿವೆ. ಇಷ್ಟು ಜನಸಂಖ್ಯೆ ಇರುವ ನಮ್ಮ ಸಮಾಜದ ಮೇಲಾದ ಒಳ ಮೀಸಲಾತಿ ಅನ್ಯಾಯ ಸರಿಪಡಿಸದಿದ್ದರೆ ಮುಂದಿನ ದಿನಗಳಲ್ಲಿ ರಾಸ್ತಾ ರೋಕೊ, ಜಿಲ್ಲಾಧಿಕಾರಿಗಳಿಗೆ ಮುತ್ತಿಗೆ, ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಲು ಹಿಂಜರಿಯುದಿಲ್ಲ. ಈಗಾಗಲೆ ನಮ್ಮ ಸಮಾಜಕ್ಕೆ ಕರೆ ಕೊಡಲಾಗಿದ್ದು, ಸಂಪೂರ್ಣ ತಾಂಡಾಗಳು ಖಾಲಿ ಆಗಿ ಬೀದರ್ ಚಲೊ ಚಳುವಳಿಯಲ್ಲಿ ಪಾಲ್ಗೊಳ್ಳಬೇಕು. ಮುಖ್ಯಮಂತ್ರಿಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಅನ್ಯಾಯ ಸರಿಪಡಿಸಬೇಕೆಂದು ಆಗ್ರಹಿಸಿದರು.

ಮಾಜಿ ಸಂಸದ ಡಾ.ಉಮೇಶ ಜಾಧವ ಮಾತನಾಡಿ, ನಾಗಮೋಹನದಾಸ್ ವರದಿ ಮಾಡುವ ಸಂದರ್ಭದಲ್ಲಿ ಅವರಿಗೆ ಏಪ್ರಿಲ, ಮೇ ಹಾಗೂ ಜೂನ್ ತಿಂಗಳಲ್ಲಿ ಸರ್ವೇ ಕಾರ್ಯ ಕೈಬಿಡಬೇಕೆಂದು ವಿನಂತಿಸಲಾಗಿತ್ತು. ಆದರೆ ನಮ್ಮ ಮನವಿಗೆ ಕ್ಯಾರೆ ಎನ್ನಲಿಲ್ಲ. ವೈಜ್ಞಾನಿಕವಾಗಿ ನಾಗಮೋಹನದಾಸ್ ವರದಿ ತಯ್ಯಾರು ಆಗಲಿಲ್ಲ. ಸುಪ್ರಿಮ್ ಕೋರ್ಟ್ ಆದೇಶದ ಪ್ರಕಾರ ಎಂಪೆರಿಟಕಲ್ ಡಾಟಾ ಸಂಪೂರ್ಣವಾಗಿ ಬಹಿರಂಗವಾಗಬೇಕು ಹಾಗೂ ಈಗ ನ್ಯಾಶ್ನಲ್ ಸೆನ್ಸೆಸ್ ನಡೆಯುತ್ತಿದ್ದು, ಅದು ಪೂರ್ಣ ಆದ ಬಳಿಕವೇ ಮೀಸಲಾತಿ ಜಾರಿಯಾಗಬೇಕು ಎಂದವರು ಹೇಳಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅಧ್ಯಕ್ಷರಾದ ಬಳಿಕ ನಮ್ಮ ಸಮಾಜಕ್ಕೆ ದೊಡ್ಡ ಅನ್ಯಾಯವಾಗಿದೆ. ರಾಜ್ಯ ಮಂತ್ರಿ ಮಂಡಲದಲ್ಲಿ ನಮ್ಮ ಸಮಾಜದ ಒಬ್ಬ ಶಾಸಕನೂ ಮಂತ್ರಿ ಆಗದೇ ಇರುವುದು ದೊಡ್ಡ ದುರಂತ. ಪಕ್ಕದ ಮಹಾರಾಷ್ಟ್ರದಲ್ಲಿ ನಮ್ಮ ಸಮಾಜದ ಇಬ್ಬರು ಶಾಸಕರು ಮಂತ್ರಿಗಳಾಗಿದ್ದಾರೆ. ಕಾಂಗ್ರೆಸ್ ಸದಾ ನಮ್ಮ ಸಮಾಜಕ್ಕೆ ತುಳಿಯುತ್ತಲ್ಲೆ ಬಂದಿದ್ದು, ಹೊಸ ಮುಖ್ಯಮಂತ್ರಿಗಳು ಇದನ್ನು ಸರಿಪಡಿಸಬೇಕೆಂದು ಒತ್ತಾಯಿಸಿದರು.

ಬಿಜೆಪಿ ಎಸ್.ಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಲಿಂಬಾ ನಾಯಕ, ಸಮಾಜದ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಗೋಪಾಲಸಿಂಗ ರಾಠೋಡ, ಬಂಜಾರಾ ಸಮಾಜದ ಅಧ್ಯಕ್ಷ ಬಸವರಾಜ ಪವಾರ, ಮುಖಂಡರಾದ ಸಚಿನ್ ರಠೋಡ್, ಮಂಜುನಾಥ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

**ಶ್ರೀ ಆಂಜನೇಯ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ**
ರಾಂಪೂರೆ (ಬ್ಯಾಂಕ್) ಕಾಲೋನಿ, ಬೀದರ.

ದಿನಾಂಕ : 12-07-2026

ನೊಂದಣಿ ಸಂಖ್ಯೆ: ಸ.ಪಿ.1/ಪಿ4/1945/2011-12

**15ನೇ ವಾರ್ಷಿಕ ಮಹಾಸಭೆಯ ನೋಟಿಸು**

ಇವರಿಗೆ,

ಶ್ರೀಮತಿ/ಶ್ರೀ ..........................................

ಈ ನೋಟಿಸಿನ ಮೂಲಕ ಸೌಹಾರ್ದ ಸಹಕಾರಿಯ ಸರ್ವ ಸದಸ್ಯರಿಗೆ ತಿಳಿಸುವುದೇನೆಂದರೆ, ದಿನಾಂಕ **12-07-2026** ರಂದು ರವಿವಾರ ಮುಂಜಾನೆ **11-00** ಗಂಟೆಗೆ ಸಂಘದ ಆವರಣದಲ್ಲಿ (ಶ್ರೀ ಆಂಜನೇಯ ದೇವಸ್ಥಾನ) ಸಹಕಾರಿಯ ಅಧ್ಯಕ್ಷರಾದ ಶ್ರೀ ಹಾವಗಿರಾವ ಮೈಲಾರೆ ಇವರ ಅಧ್ಯಕ್ಷತೆಯಲ್ಲಿ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯಲಾಗಿದೆ. ಸದಸ್ಯ ಬಂಧುಗಳು ಸಭೆಯಲ್ಲಿ ಪಾಲ್ಗೊಂಡು ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಿದೆ.

ಚರ್ಚಿಸತಕ್ಕಂಥ ವಿಷಯಗಳು :
1) ಇಂದಿನ ಸಭೆಯ ನೋಟಿಸು ಓದಿ ದಾಖಲಿಸುವುದು
2) ಹಿಂದಿನ ವರ್ಷದ ಸಾಮಾನ್ಯ ಸಭೆಯ ನಡಾವಳಿ ಮತ್ತು ನಿರ್ಣಯಗಳನ್ನು ಓದಿ ಅಂಗೀಕರಿಸುವುದು.
3) 2025-26ನೇ ಸಾಲಿನ ವಾರ್ಷಿಕ ವರದಿಯ ಮಂಡನೆ ಮತ್ತು ಅನುಮೋದನೆ.
4) 2025-26ನೇ ಸಾಲಿನ ಲೆಕ್ಕ ಪರಿಶೋಧನೆ ವರದಿಯ ಅಂಗೀಕಾರ
5) 2025-26ನೇ ಸಾಲಿನ ಜಮಾ-ಖರ್ಚು, ಆಸ್ತಿ ಜವಾಬ್ದಾರಿ ಲಾಭ ಹಾನಿ ಪತ್ರಿಕೆಯ ವರದಿ ಮತ್ತು ಮಂಡನೆ
6) ಹಿಂದಿನ ಸಹಕಾರ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ
7) ಮುಂದಿನ ಸಹಕಾರಿ ವರ್ಷದ ವಾರ್ಷಿಕ ಬಜೆಟಿನ್ ಅನುಮೋದನೆ.
8) 2026-27ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ ಮಾಡುವ ಕುರಿತು.
9) ಉಪ ವಿಧಿಯ ತಿದ್ದುಪಡಿಯ ಬಗ್ಗೆ
10) ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು ಚರ್ಚೆ

ಆಡಳಿತ ಮಂಡಳಿಯ ಆದೇಶ ಮೇರೆಗೆ

ದಿನಾಂಕ : 06-06-2026
ಸ್ಥಳ : ಆಂಜನೇಯ ದೇವಸ್ಥಾನ
ರಾಂಪೂರೆ ಕಾಲೋನಿ, ಬೀದರ.

ಸಹಿ/-
ಮುಖ್ಯ ಕಾರ್ಯನಿರ್ವಾಹಕರು
ಶ್ರೀ ಆಂಜನೇಯ ಸೌಹಾರ್ದ ಪತ್ತಿನ
ಸಹಕಾರಿ ನಿಯಮಿತ
ರಾಂಪೂರೆ (ಬ್ಯಾಂಕ್) ಕಾಲೋನಿ, ಬೀದರ.


# ಗ್ರಾಮೀಣ ಭಾಗದಲ್ಲಿ ಕಲೆ ಜೀವಂತವಾಗಿದೆ: ಭೀಮರೆಡ್ಡಿಗೌಡ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ನಮ್ಮ ನಾಡು ಸಂಸ್ಕೃತಿಯ ನಾಡಾಗಿ ಕಲೆ ಸಾಹಿತ್ಯ ಸಂಸ್ಕೃತಿಯನ್ನು ಹೊಂದಿರುವಂತ ವಿಶಿಷ್ಟ ವೈಶಿಷ್ಟತೆಯನ್ನು ಹೊಂದಿದೆ, ಗ್ರಾಮೀಣ ಭಾಗದಲ್ಲಿ ಕಲೆ ಇಂದಿಗೂ ಜೀವಂತವಾಗಿದೆ ಎಂದು ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷ ಭೀಮರೆಡ್ಡಿಗೌಡ ಪೊಲೀಸ್ ಪಾಟೀಲ್ ಹೇಳಿದರು. ತಾಲೂಕಿನ ಎಂ ಹೊಸಳ್ಳಿ ಗ್ರಾಮದ ಶ್ರೀ ಆಂಜನೇಯ ದೇವಸ್ಥಾನ ಆವರಣದಲ್ಲಿ ನಡೆದ ಶಿವ ಸಂಗೀತ ಸಾಂಸ್ಕೃತಿಕ ಕಲಾ ಸಂಸ್ಥೆ (ರಿ) ಗಿರಿನಗರ ಎಂ.ಹೊಸಳ್ಳಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು (ಯಾದಗಿರಿ) ಇವರ ಸಂಯುಕ್ತಾ ಆಶ್ರಯದಲ್ಲಿ ನಡೆದ ಜಾನಪದ ಸಂಗೀತೋತ್ಸವ ಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಭಾವೈಕ್ಯತೆಯಲ್ಲಿ ಏಕತೆಯನ್ನು ಸಾರುವ ನಮ್ಮ ದೇಶದಲ್ಲಿ ಅನೇಕ ನಾನಾ ರೀತಿಯ ಕಲೆ ಸಾಹಿತ್ಯ ಸಂಸ್ಕೃತಿಯನ್ನು ಹೊಂದಿದೆ, ನಮ್ಮ ಭಾಗದಲ್ಲಿ ಅತಿ ಹೆಚ್ಚಾಗಿ ಮೊಹರಂ ಪದ, ಸೋಬಾನ ಪದ, ಹಗಲುವೇಷ, ಸುಗಮ ಸಂಗೀತ, ಬಯಲು ನಾಟಕ ಮತ್ತು



ಸಾಮಾಜಿಕ ನಾಟಕಗಳು ಇನ್ನು ಜೀವಂತವಾಗಿದ್ದಾವೆ , ಅದನ್ನು ಸರ್ಕಾರ ಹೆಚ್ಚಿನ ರೀತಿಯಲ್ಲಿ ಸಂಘ ಸಂಸ್ಥೆಗಳಿಗೆ ಅನುದಾನ ನೀಡಿ ಕಲೆಗೆ ಪ್ರೋತ್ಸಾಹ ನೀಡಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ತಿಪ್ಪರಡ್ಡಿಗೌಡ ಪೊಲೀಸ್ ಪಾಟೀಲ್, ಮಹಿಪಾಲರಡ್ಡಿ ಮಾಲಿ ಪಾಟೀಲ್, ವೆಂಕಟರೆಡ್ಡಿಗೌಡ ಪೊಲೀಸ್ ಪಾಟೀಲ್, ಗ್ರಾ.ಪಂ.ಮಾಜಿ ಅಧ್ಯಕ್ಷ ಮಲ್ಲರೆಡ್ಡಿ ಕಾಮರೆಡ್ಡಿ, ಯಂಕಪ್ಪ ದೊರೆ ಗ್ರಾ.ಪಂ.ಸದಸ್ಯರು ಎಂ. ಹೊಸಳ್ಳಿ, ಸಾಹೇಬಗೌಡ ಚಟ್ನಳ್ಳಿ, ಮರೆಪ್ಪ ಹುಲಕಲ್, ಶಿವ ಸಂಗೀತ ಸಾಂಸ್ಕೃತಿಕ ಕಲಾ ಸಂಸ್ಥೆ ಅಧ್ಯಕ್ಷ ಮಹಾದೇವ ಸಿತಾರಿ ಅಧ್ಯಕ್ಷತೆವಹಿಸಿದರು, ಶರಣಪ್ಪ ಜೀನಕೇರಿ, ದೇವಪ್ಪ ನಾಟೇಕಾರ, ಮಲ್ಲಯ್ಯ ಕುಂಬಾರ, ಮರೇಪ್ಪ ಜೀನಕೇರಿ, ರವಿ ನಾಟೇಕಾರ ಮುಂತಾದವರು ಇದ್ದರು.

ಈ ವೇಳೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಿದ ಕಲಾ ತಂಡಗಳಾದ ಮಲ್ಲಯ್ಯಸ್ವಾಮಿ ಹಿರೇಮಠ ಸುಗಮ ಸಂಗೀತ, ಮಲ್ಲಪ್ಪ ಪೂಜಾರಿ ಗೋಡಿಹಾಳ ಜಾನಪದ ಗೀತೆ, ಶರಣಕುಮಾರ ವಠಾರ ಶಾಸ್ತ್ರೀಯ ಸಂಗೀತ, ಮರೆಪ್ಪ ಶಿರವಾಳ ಹಾರ್ನಿಮೂನಿಯಮ್, ಶಂಕರ ಶಾಸ್ತ್ರೀ ವಚನ ಗಾಯನ, ಹಣಮಂತ ದಾಸವಾಣಿ, ಅಯ್ಯಣ್ಣಗೌಡ ಆಲೂರು ತತ್ವಪದ ಗಾಯನ, ಪರಶುರಾಮ ವಚನ ಗೀತೆ, ಶ್ರೀಮತಿ ನಾಗಮ್ಮ ಸಾಂಪ್ರದಾಯ ಸಂಗೀತ, ಪ್ರಾಣೇಶ ಶಹಾಪೂರ ತಬಲಾ ಸಾಥ್, ಗುರುದತ್ತ ಭಾವಗೀತೆ ಹಾಡಿ ನೋಡುಗರ ಗಮನ ಸೆಳೆದರು.

# ನಿರಾಶ್ರಿತರಿಗೆ ಯಾವುದೇ ಸೌಲಭ್ಯ ಕೊರತೆಯಾಗದಂತೆ ಸೇವೆ ನೀಡಿ: ಡಾ. ವಿಠೋಬ ಯಾದವ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ನಿರಾಶ್ರಿತರಿಗೆ ಅಗತ್ಯ ಸೌಲಭ್ಯಗಳನ್ನು ಯಾವುದೇ ಕೊರತೆ-ಯಾಗದಂತೆ ಒದಗಿಸಿ, ಮಾನವೀಯ ನೆಲೆಯಲ್ಲಿ ಸೇವೆ ಸಲ್ಲಿಸಬೇಕು ಎಂದು ಕೌಶಲ್ಯಾಭಿವೃದ್ಧಿ ಇಲಾಖೆಯ ಅಭಿಯಾನ ವ್ಯವಸ್ಥಾಪಕ ಡಾ. ವಿಠೋಬ ಯಾದವ್ ಸೂಚಿಸಿದರು.

ನಗರದ ವಸತಿ ರಹಿತರ ಆಶ್ರಯ ಕೇಂದ್ರಕ್ಕೆ ಭೇಟಿ ನೀಡಿ ಕೇಂದ್ರದಲ್ಲಿನ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು.ಆಶ್ರಯ ಕೇಂದ್ರದಲ್ಲಿ ನಿರಾಶ್ರಿತರಿಗೆ ಸುರಕ್ಷಿತ ವಸತಿ, ಶುದ್ಧ ಕುಡಿಯುವ ನೀರು, ಪೌಷ್ಟಿಕ ಆಹಾರ, ಸ್ವಚ್ಛ ಮತ್ತು ಆರೋಗ್ಯಕರ ವಾತಾವರಣ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳು ಸಮರ್ಪಕವಾಗಿ ದೊರೆಯುವಂತೆ ನಿರಂತರ ಗಮನಹರಿಸಬೇಕು ಎಂದು ಹೇಳಿದರು.

ಪರಿಶೀಲನೆ ವೇಳೆ ಕುಡಿಯುವ ನೀರು, ಸ್ವಚ್ಛತೆ, ವಿದ್ಯುತ್, ಆಹಾರ, ಹಾಸಿಗೆ, ಬಟ್ಟೆ ಸೇರಿದಂತೆ ಮೂಲಭೂತ ಸೌಲಭ್ಯಗಳ ಸ್ಥಿತಿಗತಿಯನ್ನು



ಅವಲೋಕಿಸಿದರು. ಮಹಿಳಾ ನಿರಾಶ್ರಿತರಿಗೆ ಪ್ರತ್ಯೇಕ ಕೊಠಡಿಗಳ ವ್ಯವಸ್ಥೆ, ಸುರಕ್ಷಿತ ವಸತಿ ಹಾಗೂ ಕೇಂದ್ರದ ಸ್ವಚ್ಛತಾ ನಿರ್ವಹಣೆ ಕುರಿತು ಅಧಿಕಾರಿಗಳು ಖಚಿತಪಡಿಸಿಕೊಂಡರು.

ನಗರಸಭೆಯ ಸಿಎಓ ನಾಗರಾಜ ಚಟ್ನಳ್ಳಿ ಅವರು ಕೇಂದ್ರದಲ್ಲಿ ನಿರಾಶ್ರಿತರಿಗೆ ನೀಡಲಾಗುತ್ತಿರುವ ಸೇವೆಗಳು, ನಿರ್ವಹಣಾ ವ್ಯವಸ್ಥೆ ಹಾಗೂ ಲಭ್ಯವಿರುವ ಮೂಲಸೌಕರ್ಯಗಳ ಕುರಿತು ಮಾಹಿತಿ ಪಡೆದು, ಸೇವೆಯಲ್ಲಿ ಯಾವುದೇ ಲೋಪ ಉಂಟಾಗದಂತೆ ನೋಡಿಕೊಳ್ಳುವಂತೆ ಸೂಚಿಸಿದರು.

ಬಳಿಕ ಆಶ್ರಯ ಕೇಂದ್ರದಲ್ಲಿ ವಾಸಿಸುತ್ತಿರುವ ಶರಣಪ್ಪ, ರಾಘವೇಂದ್ರ, ದವಲಸಾಬ್, ಈರಣ್ಣ ಸೇರಿದಂತೆ ಇತರ ನಿರಾಶ್ರಿತರೊಂದಿಗೆ ಅಧಿಕಾರಿಗಳು ಸಂವಾದ ನಡೆಸಿ, ಅವರ ಸಮಸ್ಯೆಗಳು, ಅಗತ್ಯತೆಗಳು ಹಾಗೂ ಸಲಹೆಗಳನ್ನು ಆಲಿಸಿದರು.

ಈ ಸಂದರ್ಭದಲ್ಲಿ ಸಿಆರ್ಪಿಗಳಾದ ಅವ್ವಮ್ಮ, ಪ್ರೇಮಾ ಹಾಗೂ ಸಾಬಮ್ಮ, ಆಶ್ರಯ ಕೇಂದ್ರದ ನಿರ್ವಹಣೆ ಮಾಡುತ್ತಿರುವ ಭಾರತಾಂಬೆ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮುಖ್ಯಸ್ಥ ಭೀಮಾಶಂಕರ ದೊಡ್ಮನಿ, ಕೇಂದ್ರದ ವ್ಯವಸ್ಥಾಪಕ ಬೀರಲಿಂಗಪ್ಪ ಕಿಲ್ಲನಕೇರಾ, ಕೇರ್‌ಟೇಕರ್‌ಗಳಾದ ಯಲ್ಲಾಲಿಂಗ ಹಾಗೂ ಸಿದ್ದಮ್ಮ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ನೊಂದವರ ಸೇವೆಯೇ ಜೀವನದ ಸಾರ್ಥಕತೆ: ಎಸ್‌ಪಿ ಪೃಥ್ವಿಕ್



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

"ಮಾನವ ಜೀವನದ ನಿಜವಾದ ಸಾರ್ಥಕತೆ ಅಧಿಕಾರ-ಸಂಪತ್ತಿನಲ್ಲಿಲ್ಲ. ಬದಲಾಗಿ ನೊಂದವರ ಕಣ್ಣೀರೊರೆಸಿ, ದೀನದಲಿತರ ಕೈಹಿಡಿಯುವುದರಲ್ಲಿದೆ" ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಹೇಳಿದರು.

ನಗರದ ಬಸವೇಶ್ವರ ಕಲ್ಯಾಣಮಂಟಪದಲ್ಲಿ ಶನಿವಾರ ಸಂಜೆ ನಡೆದ ಲಯನ್ಸ್ ಕ್ಲಬ್ ಯಾದಗಿರಿ ಘಟಕದ ನೂತನ ಅಧ್ಯಕ್ಷ ಡಾ. ಸಿದ್ಧರಾಜರೆಡ್ಡಿ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಯಾದಗಿರಿ ಜಿಲ್ಲೆಯಲ್ಲಿ ಕಳೆದ ಹಲವು ವರ್ಷಗಳಿಂದ ಲಯನ್ಸ್ ಕ್ಲಬ್ ಪರಿಸರ ರಕ್ಷಣೆ, ಉಚಿತ ಆರೋಗ್ಯ ಸೇವೆ ಹಾಗೂ ಶೈಕ್ಷಣಿಕ ನೆರವು ನೀಡುವ ಮೂಲಕ ಮಾನವ ಕಲ್ಯಾಣಕ್ಕೆ ಶ್ರಮಿಸುತ್ತಿದೆ. ಜಾಗತಿಕ ವಿಪತ್ತು ವೇಳೆಯೂ ಮುಂಚೂಣಿಯಲ್ಲಿ ನಿಂತು ಸೇವೆ ಸಲ್ಲಿಸಿರುವುದು ಇಡೀ ವಿಶ್ವಕ್ಕೆ ಮಾದರಿಯಾಗಿದೆ ಎಂದು ಕ್ಲಬ್ ಕಾರ್ಯವನ್ನು ಶ್ಲಾಘಿಸಿದರು. ವಿವಿಧ ಸಂಘ-ಸಂಸ್ಥೆಗಳ ಮೂಲಕ ಅಪಾರ ಸಾಮಾಜಿಕ ಅನುಭವ ಹೊಂದಿರುವ ಡಾ. ಸಿದ್ಧರಾಜರೆಡ್ಡಿ ಅವರ ಸಮರ್ಥ ನಾಯಕತ್ವದಲ್ಲಿ ಕ್ಲಬ್ ಇನ್ನಷ್ಟು ಜನಪರ ಯೋಜನೆಗಳನ್ನು ಜಾರಿಗೊಳಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಸೇವೆಗೆ ಹೊಸ ಸಂಕಲ್ಪ:

ಲಯನ್ ಹರಿನಾರಾಯಣ ಭಟ್ಟಡ್ ನೂತನ ಪದಾಧಿಕಾರಿಗಳ ಪ್ರಮಾಣವಚನ ಬೋಧಿಸಿ ಸಂಸ್ಥೆಯ ಧ್ಯೇಯ-ಜವಾಬ್ದಾರಿ ಕುರಿತು ವಿವರಿಸಿದರು. ಮುಖ್ಯ ಅತಿಥಿಯಾಗಿ ಪಾಲ್ಗೊಂಡ ಲಯನ್ಸ್ ಕ್ಲಬ್ ಹೈದರಾಬಾದ್ ವಲಯದ ಮುಖ್ಯಸ್ಥ ಲಯನ್ ಸುರೇಶ ಜಗ್ನಾನಿ ಮಾತನಾಡಿ, ಯಾದಗಿರಿ ಕ್ಲಬ್ ಕೈಗೊಳ್ಳುವ ಪ್ರತಿಯೊಂದು ಸೇವಾ ಕಾರ್ಯಕ್ಕೂ ವಲಯದಿಂದ ಸಂಪೂರ್ಣ ಬೆಂಬಲ ಇರಲಿದೆ. ಸಮಾಜದಲ್ಲಿ ಶಾಶ್ವತವಾಗಿ ನೆನಪಿನಲ್ಲಿ ಉಳಿಯುವ ಅರ್ಥಪೂರ್ಣ ಯೋಜನೆಗಳನ್ನು ಹಮ್ಮಿಕೊಳ್ಳಿ ಎಂದು ನೂತನ ತಂಡಕ್ಕೆ ಕರೆ ನೀಡಿದರು.ನೂತನ ಅಧ್ಯಕ್ಷ ಡಾ. ಸಿದ್ಧರಾಜರೆಡ್ಡಿ ಮಾತನಾಡಿ, ಮುಂದಿನ ದಿನಗಳಲ್ಲಿ ನೂರಾರು ಜನರಿಗೆ ಉಚಿತ ನೇತ್ರ ಶಸ್ತ್ರಚಿಕಿತ್ಸೆ, ಸಾವಿರಾರು ಗಿಡ ನೆಡುವಿಕೆ, ಹಾಗೂ ಸ್ವಾವಲಂಬಿ ಕೇಂದ್ರ ಸ್ಥಾಪಿಸಿ ಶಾಶ್ವತ ಉದ್ಯೋಗ ನೀಡುವ ಉದ್ದೇಶ ಹೊಂದಲಾಗಿದೆ ಎಂದು ಘೋಷಿಸಿದರು.ಕಾರ್ಯಕ್ರಮದಲ್ಲಿ ನಿರ್ಗಮಿತ ಅಧ್ಯಕ್ಷ ಭೀಮನಗೌಡ ಕ್ಯಾತ್ನಾಳ, ಕಾರ್ಯದರ್ಶಿ ಮಲ್ಲಿಕಾರ್ಜುನ ಶಿರಗೋಳ, ಖಜಾಂಚಿ ಸಿದ್ರಾಮರೆಡ್ಡಿ ತಿಪ್ಪರೆಡ್ಡಿ, ಕಸಾಪ ಅಧ್ಯಕ್ಷ ಸಿದ್ಧಪ್ಪ ಹೊಟ್ಟಿ, ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಚನ್ನಪ್ಪಗೌಡ ಮೋಸಂಬಿ ಸೇರಿದಂತೆ ಹಲವು ಗಣ್ಯರು, ಕ್ಲಬ್ ಪದಾಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

# ಸಿಂಧನೂರಿನಲ್ಲಿ ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ: ಆರೋಪಿಗೆ ಕಠಿಣ ಶಿಕ್ಷೆಗೆ ಆಗ್ರಹಿಸಿ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಜೂ 30:ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ದುಷ್ಕರ್ಮಿಯನ್ನು ಕೂಡಲೇ ಬಂಧಿಸಿ, ಆತನಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ವಿದ್ಯಾರ್ಥಿಗಳು ಹಾಗೂ ಕಾರ್ಯಕರ್ತರು ಇಂದು ಬೃಹತ್ ಪ್ರತಿಭಟನೆ ನಡೆಸಿ. ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು.ಸಂತ್ರಸ್ತರು ಅತ್ಯಂತ ಬಡ ದಲಿತ ಕುಟುಂಬಕ್ಕೆ ಸೇರಿದವರಾಗಿದ್ದು, ಖಾಸಗಿ ಜಾಗವೊಂದರಲ್ಲಿ ಶೆಡ್ ನಿರ್ಮಿಸಿಕೊಂಡು ಕೂಲಿ ಕೆಲಸದ ಮೂಲಕ ಜೀವನ ಸಾಗಿಸುತ್ತಿದ್ದಾರೆ. ಪಾಲಕರು ಮನೆಯಲ್ಲಿಲ್ಲದ ಸಮಯವನ್ನು ಗಮನಿಸಿದ ಆರೋಪಿಯು, ಬಾಲಕಿಯರಿಗೆ ಚಾಕು ತೋರಿಸಿ ಬೆದರಿಸಿ ಸತತ ನಾಲ್ಕೈದು ದಿನಗಳ ಕಾಲ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಅಲ್ಲದೆ, ವಿಷಯವನ್ನು ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುವ ಈ ಕೃತ್ಯವನ್ನು ಪ್ರತಿಭಟನಾಕಾರರು ತೀವ್ರವಾಗಿ ಖಂಡಿಸಿದರು.ಪ್ರತಿಭಟನಾಕಾರರ ಪ್ರಮುಖ ಬೇಡಿಕೆಗಳು: * ಆರೋಪಿಗೆ ಕಾನೂನಿನಡಿ ಗರಿಷ್ಠ ಶಿಕ್ಷೆ ವಿಧಿಸಬೇಕು. * ಸಂತ್ರಸ್ತ ಕುಟುಂಬಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ಮತ್ತು ಭದ್ರತೆ ಒದಗಿಸಬೇಕು.



* ಬಾಧಿತ ಮಕ್ಕಳನ್ನು ಉಚಿತ ವಸತಿ ಶಾಲೆಗೆ ಸೇರಿಸಿ, ಅವರ ಸಂಪೂರ್ಣ ಶಿಕ್ಷಣದ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು.

* ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗಾಗಿ ನಿರ್ಭಯಾ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.

* ಅಸುರಕ್ಷಿತ ಮಕ್ಕಳ ರಕ್ಷಣೆಗಾಗಿ ಅಂಗನವಾಡಿ ಮಾದರಿಯಲ್ಲಿ 'ಸುರಕ್ಷಾ ಕೇಂದ್ರ'ಗಳನ್ನು ಸ್ಥಾಪಿಸಬೇಕು.

*ಸಾಮಾಜಿಕ ಜಾಲತಾಣಗಳಲ್ಲಿನ ಅಶ್ಲೀಲ ಚಿತ್ರಗಳ ಪ್ರದರ್ಶನವನ್ನು ನಿರ್ಬಂಧಿಸಬೇಕು ಹಾಗೂ 'ರೋಡ್ ರೋಮಿಯೋ'ಗಳ ನಿಯಂತ್ರಣಕ್ಕೆ ವಿಶೇಷ ಪಡೆಗಳನ್ನು ಸಕ್ರಿಯಗೊಳಿಸಬೇಕು ಒತ್ತಾಯಿಸಿದರು.

ಈ ಪ್ರತಿಭಟನೆಯಲ್ಲಿ ಪ್ರಗತಿಪರ ಸಂಘಟನೆಯ ಮುಖಂಡರಾದ ಚಂದ್ರಶೇಖರ ಗೋರೆಬಾಳ, ಡಿ.ಎಚ್. ಕಂಬಳಿ, ರಮೇಶ ಪಾಟೀಲ್ ಬೇರ್ಗಿ, ಬಿ.ಎನ್. ಯರದಿಹಾಳ, ಬಸವರಾಜ ಬಾದರ್ಲಿ, ವೆಂಕನಗೌಡ ಗದ್ರಟಗಿ, ಅಬ್ದುಲ್ ಸಮದ್ ಚೌದ್ರಿ, ಎಸ್. ದೇವೇಂದ್ರ ಗೌಡ, ಚಿಟ್ಟಿಬಾಬು, ಶಕುಂತಲಾ ಪಾಟೀಲ್, ವಿಜಯಲಕ್ಷ್ಮಿ ಗುರಿಕಾರ, ಸರಸ್ವತಿ ಪಾಟೀಲ್, ಶರಣೇಗೌಡ ಗಿಣಿವಾರ, ಹುಸೇನ್ ಸಾಬ್ ಸೇರಿದಂತೆ ಅನೇಕ ಸಂಘಟನೆಯ ಪದಾಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಪ್ರಭುದ್ದ ಜೀವನಕ್ಕೆ ಮಾದಕ ವಸ್ತುಗಳು ಮಾರಕ



• ಮಲ್ಲಮ್ಮ ನುಡಿ ವಾರ್ತೆಬಸವನಬಾಗೇವಾಡಿ

ಪಟ್ಟಣದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆ ಬಿ. ಸಿ ಟ್ರಸ್ಟ್ ವತಿಯಿಂದ ಮಂಗಳವಾರ ಸ್ಥಳೀಯ ಬಿ. ಎಲ್. ಡಿ. ಇ ಶ್ರೀ ಬಸವೇಶ್ವರ ಕಾಲೇಜಿನಲ್ಲಿ ಮಾದಕ ವಸ್ತು ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸ್ಥಳೀಯ ಪಿಆಯ್ ಗುರುಶಾಂತ ದಾಶ್ಯಾಳ ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಧರ್ಮಸ್ಥಳ ಸಂಸ್ಥೆಯು ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಕುರಿತು ಡಾ. ವೀರೇಂದ್ರ ಹಾಗೂ ಶ್ರೀಮತಿ ಹೇಮಾವತಿ ಅಮ್ಮನವರು ಮಾಹಿತಿಯನ್ನು ಆನಲೈನನಲ್ಲಿ ತಿಳಿಸಿವುದರ ಮೂಲಕ ವಿದ್ಯಾರ್ಥಿಗಳ ಸುಂದರ ಬದುಕಿಗೆ ದಾರಿದೀಪವಾಗುತ್ತಿದ್ದಾರೆ ಎಂದರು.

ಸಂಪನ್ಮೂಲ ವ್ಯಕ್ತಿಯಾಗಿ ವೆಂಕಟೇಶ್ ಪ್ರಸನ್ನ ಮಾತನಾಡಿ, ಮಾದಕ ವಸ್ತುಗಳು ಯಾವ ಯಾವ ಮೂಲಗಳಿಂದ ಸಿಗುತ್ತದೆ. ಅವುಗಳನ್ನು ಮುಂದಿನ ಪ್ರಭುದ್ದ ಜೀವನವನ್ನು ನೆಡೆಸಲು ನಾವು ಹೇಗೆ ಅವುಗಳನ್ನು ತಡೆಯಬೇಕು. ಆ ಮಾದಕ ವಸ್ತು ಸೇವನೆಯಿಂದ ಬರುವ ರೋಗಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು. ಯೋಜನಾಧಿಕಾರಿ ಪ್ರಸನ್ನ. ಆರ್. ಕದಳಿ ವೇದಿಕೆ ಸಂಚಾಲಕಿ ಸಾವಿತ್ರಿ. ವ್ಹಿ.ಕಲ್ಯಾಣಶೆಟ್ಟಿ, ಪ್ರಾ. ಆರ್. ಎ ಪವಾರ, ಶಂಕ್ರಯ್ಯ, ರಮೇಶ್ ಸೇರಿದಂತೆ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ-2026 ಕೊಪ್ಪಳ ಜಿಲ್ಲೆಯಲ್ಲಿ 31,326 ಗಣತಿ ನಮೂನೆ ಹಂಚಿಕೆ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಭಾರತ ಚುನಾವಣಾ ಆಯೋಗದ ಪ್ರಕಟಣೆಯಂತೆ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ-2026ಗೆ ನಿಗದಿಪಡಿಸಿರುವವೇಳಾಪಟ್ಟಿಯಂತೆ ಜೂನ್ 30ರಂದು 1315 ಬೂತ್ ಮಟ್ಟದ ಅಧಿಕಾರಿಗಳು ಗಣತಿ ನಮೂನೆಗಳನ್ನು ವಿತರಿಸುವ ಸಲುವಾಗಿ ಮನೆಮನೆ ಭೇಟಿ ಕಾರ್ಯ ಪ್ರಾರಂಭಿಸಿರುತ್ತಾರೆಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಇಟ್ನಾಳ ಅವರು ತಿಳಿಸಿದ್ದಾರೆ.ಕೊಪ್ಪಳ ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಒಟ್ಟು 11,90,214 ಮತದಾರರಿದ್ದು, ಎಲ್ಲಾ ಮತದಾರರ ಗಣತಿ ನಮೂನೆಗಳು ಮುದ್ರಿತವಾಗಿದ್ದು, ಈ ನಮೂನೆಗಳನ್ನು ಈಗಾಗಲೇ ಸಂಬಂಧಪಟ್ಟ ಬೂತ್ ಮಟ್ಟದ ಅಧಿಕಾರಿಗಳಿಗೆ ವಿತರಿಸಲಾಗಿರುತ್ತದೆ. ಇದರ ಪೈಕಿ ಜೂನ್ 30ರ



ಬೆಳಿಗ್ಗೆಯಿಂದ ಸಂಜೆ 6 ಗಂಟೆವರೆಗೆ ಒಟ್ಟು 31,326 ಗಣತಿ ನಮೂನೆಗಳನ್ನು (Enumeration Forms) ಮತದಾರರಿಗೆ ಹಂಚಿಕೆ ಮಾಡಲಾಗಿರುತ್ತದೆ. ಭಾರತ ಚುನಾವಣಾ ಆಯೋಗದ ವೇಳಾಪಟ್ಟಿಯಂತೆ ಗಣತಿ ನಮೂನೆಗಳ ಹಂಚಿಕೆ ಮಾಡಲು ಹಾಗೂ ಭರ್ತಿ ಮಾಡಿದ ಗಣತಿ ನಮೂನೆಗಳನ್ನು ಸಂಗ್ರಹಿಸಲು ದಿನಾಂಕ:29.07.2026 ರವರೆಗೆ ಕಾರ್ಯ ನಡೆಯಲಿರುತ್ತದೆ.ಆದ್ದ-ರಿಂದ ಕೊಪ್ಪಳ ಜಿಲ್ಲೆಯ ಎಲ್ಲಾ ಸಾರ್ವಜನಿಕರು ಬೂತ್ ಮಟ್ಟದ ಅಧಿಕಾರಿಗಳಿಗೆ ಮನೆ ಭೇಟಿ ಸಂದರ್ಭದಲ್ಲಿ ಸಹಕಾರ ನೀಡಿ ಬೂತ್ ಮಟ್ಟದ ಅಧಿಕಾರಿಗಳು ಕೋರುವ ಮಾಹಿತಿಯನ್ನು ಒದಗಿಸಬೇಕೆಂದು ಕೋರುತ್ತಾ ಭಾರತ ಚುನಾವಣಾ ಆಯೋಗವು ನಿಗದಿಪಡಿಸಿದ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ-2026 ಪ್ರಕ್ರಿಯೆಯನ್ನು ಯಶಸ್ವಿಗೊಳಿಸಲು ಕೋರಲಾಗಿದೆ ಎಂದು ಜಿಲ್ಲಾಧಿಕಾರಿಗಳ ಕಚೇ-ರಿಯ ಪ್ರಕಟಣೆ ತಿಳಿಸಿದೆ.

# ಹಾವು ಕಚ್ಚಿ ರೈತ ಸಾವು

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ರೈತ ತಮ್ಮ ತೋಟದ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದ ಸಂದರ್ಭದಲ್ಲಿ ಹಾವು ಕಚ್ಚಿ ಮೃತಪಟ್ಟಿರುವ ಘಟನೆ ತಿಳಿದುಬಂದಿದೆ ತಾಲೂಕಿನ ಬನ್ನಿ ಕುಪ್ಪೆ ಕಸಬಾ ಹೋಬಳಿ ಮರದೂರು ಗ್ರಾಮದ ಬಸವರಾಜ ಗೌಡ ವಯಸ್ಸು 65 ಎಂಬುವವರು ತಮ್ಮ ಜಮೀನಿನಲ್ಲಿ ಬೆಳಿಗ್ಗೆ ನಜಾವ ವ್ಯವಸಾಯ ಮಾಡುತ್ತಿದ್ದ ಸಂದರ್ಭದಲ್ಲಿ ಹಾವು ಕಚ್ಚಿ ಇರುವ ವಿಷಯ ತಿಳಿದು ಹುಣಸೂರು ನಗರ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರತರುವಾಗ ಮಧ್ಯಮಾರ್ಗ ಮೃತಪಟ್ಟಿದ್ದಾರೆ ಅವರು ಇಬ್ಬರು ಮಕ್ಕಳು ಹೆಂಡತಿ ಅಗಲಿದ್ದಾರೆ ಈ ದೂರನ್ನು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ ಮೃತಪಟ್ಟ ಕುಟುಂಬಕ್ಕೆ ಸಾಂತ್ವನ ಹೇಳಿ ಸರ್ಕಾರದಿಂದ ಸಹಾಯಧನ ನೀಡಬೇಕೆಂದು ಮಾಜಿ ತಾಲೂಕ ಪಂಚಾಯತಿಯ ಉಪಾಧ್ಯಕ್ಷರಾದ ಪ್ರೇಮ್ ಗೌಡ ನಾವು ಒತ್ತಾಯಿಸುತ್ತೇವೆ ಆ ಮೃತಪಟ್ಟ ಕುಟುಂಬಕ್ಕೆ ಸಹಾಯಧನ ತಲುಪಿಸುವ ಕರ್ತವ್ಯವನ್ನು ನಾವು ಮಾಡುತ್ತೇವೆ ಎಂದು ತಿಳಿಸಿದ್ದಾರೆ

# ಯುವಕನ ಮೇಲೆ ಚಾಕುವಿನಿಂದ ಹಲ್ಲೆ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಪ್ರೀತಿಸುತ್ತಿದ್ದ ಯುವಕನನ್ನು ತಿಳಿಹೇಳಿ ಎಂದು ಯುವತಿಯ ತಂದೆ ಹಾಗೂ ಮಗ ಸೇರಿ ಪ್ರೀತಿಸುತ್ತಿದ್ದ ಯುವಕನ ರಾತ್ರಿ ಸಮಯದಲ್ಲಿ ಮೊಹಮ್ಮದ್ ಪೈಜಾನ್ ಮನೆಯಿಂದ ಹೊರಗೆ ಕರೆದು ಚಾಕುನಿಂದ ಹಲ್ಲೆ ಮಾಡಿ ರುವ. ಎಂದು ಘಟನೆ ನಡೆದಿದೆ ಎಂದು ತಿಳಿದು ಬಂದಿದೆ ನಗರದ ಹಳೆ ಸೇತುವೆ ಭಾಗದ ರಹಮದ್ ಮೊಹಲ್ಲಾ ಒಂದೇ ಬಡಾವಣೆಯ ನಿವಾಸಿಯಾಗಿದ್ದು ಯುವತಿಯ ತಂದೆ ಗಾಲಿಬ್ ಹಾಗೂ ಅವರ ಮಗ ರಾಜೀಕ್ ಸೇರಿ ಪ್ರೀತಿಸುತ್ತಿದ್ದ ಅಬ್ದುಲ್ ಮುಜಾಹಿದ್ ಅವರ ಪುತ್ರ ಯುವಕನ ಮೇಲೆ ತೀರ್ ಮೊಹಮ್ಮದ್ ಫಾರಾನ್ ಹೊಟ್ಟೆಯ ಎಡ ಭಾಗ ಚಾಕುನಿಂದ ತೀರ ಹಲ್ಲೆ ಮಾಡಿರುವ ಘಟನೆ ತಿಳಿದು ಬಂದಿದೆ ನಂತರ ತುರ್ತಾಗಿ ಪೋಷಕರು ನಗರದ ಸಾರ್ವಜನಿಕ ಆಸ್ಪತ್ರೆಗೆ ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ತ ಹೆಚ್ಚಿನ ಚಿಕಿತ್ಸೆಗಾಗಿ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಎಸ್ ಆಸ್ಪತ್ರೆಗೆ ಸೇರಿಸಲಾಗಿದೆ

# ವಿದ್ಯುತ್ ಖಾಸಗೀಕರಣದ ವಿರುದ್ಧ ಆಕ್ರೋಶ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ತಾಲೂಕಿನ ಹೆಡಗಿಮದ್ರಾ ಗ್ರಾಮದ ಡಬ್ಬಿನ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿಯ ನರೇಗಾ ಕೂಲಿ ಕಾರ್ಮಿಕರ ನಡುವೆ ವಿದ್ಯುತ್ತಿನ ಖಾಸಗಿಕರಣದ ಬಗ್ಗೆ ಜಾಗೃತಿ ಸಭೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಅಖಿಲ ಭಾರತ ರೈತ ಕೃಷಿ ಕಾರ್ಮಿಕ ಸಂಘಟನೆಯ (ಎ.ಐ.ಕೆ.ಕೆ.ಎಮ್.ಎಸ್) ಜಿಲ್ಲಾ ಉಪಾಧ್ಯಕ್ಷರಾದ ಜಮಾಲ್ ಸಾಬ್ ಎ ಹೆಡಗಿಮದ್ರ ಮಾತನಾಡಿ ನಮ್ಮ ದೇಶದಲ್ಲಿ ನಮ್ಮನ್ನಾಳುವ ಸರಕಾರಗಳು ಸರ್ಕಾರದ ಆಸ್ತಿಪಾಸ್ತಿ ಮಾರಾಟ ಮಾಡುವುದಲ್ಲದೆ, ಸರಕಾರಿ ಸೌಮ್ಯದ ಸಂಸ್ಥೆಗಳನ್ನು ಕೂಡ ಮಾರಾಟ ಮಾಡಿ ಉಳ್ಳವರ ಮಡಿಲಿಗೆ ಹಾಕಲು ಹೊರಟಿದೆ.

ನಮ್ಮ ಪ್ರದೇಶದಲ್ಲಿ ವಿದ್ಯುತ್ ಸೇವೆಯನ್ನು ಖಾಸಗಿಕರಣ ಗೊಳಿಸುವ ಪ್ರಸ್ತಾವನೆ ಕುರಿತು ನಮಗೆ ಗಂಭೀರ ಆಕ್ಷೇಪಣೆ ಇದೆ, ವಿದ್ಯುತ್ ಒಂದು ಮೂಲಭೂತ ಸಾರ್ವಜನಿಕ ಸೇವೆಯಾಗಿದ್ದು, ಇದನ್ನು ಸಂಪೂರ್ಣವಾಗಿ ಖಾಸಗಿ ಸಂಸ್ಥೆಗಳ ವಶಕ್ಕೆ ನೀಡುವುದರಿಂದ ಸಾಮಾನ್ಯ ಜನರ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಬೀಳುವ ಸಾಧ್ಯತೆ ಇದೆ.

ಖಾಸಗಿಕರುಣದಿಂದ ವಿದ್ಯುತ್ ದರ ಹೆಚ್ಚಳವಾಗುತ್ತದೆ, ಈಗಾಗಲೇ ರೈತರಿಗೆ 10 ಎಸ್ ಪಿ ವರೆಗೆ ಉಚಿತ ವಿದ್ಯುತ್ ಸರಬರಾಜು ಇತ್ತು, ಇನ್ನು ಮುಂದೆ ಖಾಸಿಗಿಕರಣ ಆದರೆ ರೈತರ ಪಂಪ್ಸೆಟ್ ಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸುತ್ತಾರೆ, ಇದರಿಂದ ರೈತ ಬಿಲ್ ಕಟ್ಟಲಾಗದೆ ವ್ಯವಸಾಯವನ್ನು ಬಿಟ್ಟು ಗೂಳೇ ಹೋಗುವಂತ ಪರಿಸ್ಥಿತಿ ನಿರ್ಮಾಣವಾಗುತ್ತೆ, ಇದರಿಂದ ಮಕ್ಕಳು ಕೂಡ ಶಿಕ್ಷಣದಿಂದ ವಂಚಿತರಾಗುತ್ತಾರೆ ಎಂದರು.

ಮುಂದುವರೆದು ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳಾದ ಭಾಗ್ಯಜ್ಯೋತಿ, ಕುಟೀರ ಜ್ಯೋತಿ, ಗಂಗಾ ಕಲ್ಯಾಣದಂತಹ ಯೋಜನೆಗಳು ಕೊನೆಗೊಳ್ಳುತ್ತವೆ. ಗ್ರಾಮೀಣಮಟ್ಟದಲ್ಲಿ ವಿದ್ಯುತ್ ಸೇವೆಯ ಗುಣಮಟ್ಟ ಕುಸಿತವಾಗುತ್ತದೆ, ವಿದ್ಯುತ್ ಇಲಾಖೆಯ ಉದ್ಯೋಗಿಗಳ ಹಿತಾಸಕ್ತಿಗೆ ಧಕ್ಕೆ ಆಗುವಂತಹ ಸಮಸ್ಯೆಗಳು ಉಂಟಾಗಬಹುದು ಎಂಬ ಆತಂಕವಿದೆ, ವಿದ್ಯುತ್ ಖಾಸಗಿಕರಣವಾದರೆ ಅನುಕೂಲಕ್ಕಿಂತ ಅನಾನುಕೂಲನೇ ಹೆಚ್ಚು, ಪ್ರತಿ ಮನೆಗಳಿಗೂ ಕೂಡ ಸ್ಮಾರ್ಟ್ ಮೀಟರ್ ಅಳವಡಿಸುತ್ತಾರೆ, ನಾವು ಮೊಬೈಲ್ ಗೆ ಮತ್ತು ಟಿವಿಗೆ ಹೇಗೆ ರಿಚಾರ್ಜ್ ಮಾಡುತ್ತೇವೆ ಹಾಗೆಯೇ ಕರೆಂಟಿಗೂ ಕೂಡ ರಿಚಾರ್ಜ್ ಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಆದ್ದರಿಂದ ನಾವೆಲ್ಲರೂ ಒಗ್ಗಟ್ಟಾಗಿ ಖಾಸಗಿಕಾರಣದ ವಿರುದ್ಧ ಹೋರಾಟ ಮಾಡುವುದು ಅನಿವಾರ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ನೂರಾರು ಜನರು ಆಕ್ಷೇಪಣಾ ಪತ್ರಗಳಿಗೆ ಸಹಿ ಹಾಕಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಜಮಾಲ್ ಸಾಬ್ ಎ ಹೆಡಗಿಮದ್ರಾ, ಅಂಬರೀಶ್ ಧಣಿ ಕೆಂಭಾವಿ, ಮರೆಪ್ಪ ಶಂಕರ್ ಬಂಡಿ, ಸುರೇಶ್ ತೆಳಿಗೇರಿ, ಭಾಗಣ್ಣ ತೆಳಿಗೇರಿ, ಮರೆಪ್ಪ ಕೋಟೆಕಲ್, ದೇವಿಂದ್ರಪ್ಪ ತಳಿಬಿಡಿ, ಚಂದಪ್ಪ, ದೇವಪ್ಪ, ಭೀಮರಾಯ ಪೂಜಾರಿ, ಸಾಬಣ್ಣ ಹೇಳುವೂರ, ಕರಣ್, ಮಲ್ಲಮ್ಮ ಅಂಬಿಗೇರ, ಮಹಿಬೂಬೀ ಹುಲ್ಕಲ್, ಬಸ್ಸಮ್ಮ ನೈಕಲ್, ಮಲ್ಲಮ್ಮ ಪತ್ತುರ್, ಸಲೀಮಾ, ಬಂಗಾರಮ್ಮ ಬಂಗಾರಿ, ಸಾಬಮ್ಮ, ಹಣಮಂತಿ ನಟೆಕಾರ್, ಇನ್ನಿತತರು ಇದ್ದರು.

## ರೋಗಿಗಳ ವಿಶ್ವಾಸ ಗೆದ್ದ ಸೇವಾಮೂರ್ತಿ ಕೀಲು-ಮೂಳೆ ತಜ್ಞ ಡಾ. ಶ್ರೀನಿವಾಸ್‌ರ ಸೇವೆಗೆ ಮೆಚ್ಚುಗೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಆರೋಗ್ಯ ಸೇವೆಯಲ್ಲಿ ವೈದ್ಯರ ಪರಿಣತಿಯಷ್ಟೇ ರೋಗಿಗಳೊಂದಿಗೆ ಬೆಳೆಸುವ ವಿಶ್ವಾಸ, ಆತ್ಮೀಯತೆ ಮತ್ತು ಸ್ಪಷ್ಟ ಸಂವಹನವೂ ಚಿಕಿತ್ಸೆಯ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ನಿಟ್ಟಿನಲ್ಲಿ ಬಳ್ಳಾರಿಯ ಅನುಷ್ಕಾ ಆಸ್ಪತ್ರೆಯ ಕೀಲು–ಮೂಳೆ ತಜ್ಞ ಡಾ. ಶ್ರೀನಿವಾಸ್ ಅವರು ಮಾನವೀಯ ಸೇವೆ ಮತ್ತು ರೋಗಿ ಸ್ನೇಹಿ ಚಿಕಿತ್ಸಾ ವಿಧಾನದಿಂದ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಮೂಳೆ ಮುರಿತ, ಕೀಲು ನೋವು, ಸಂಧಿವಾತ, ಬೆನ್ನು ನೋವು, ಕ್ರೀಡಾ ಗಾಯಗಳು ಸೇರಿದಂತೆ ವಿವಿಧ ಮೂಳೆ ಮತ್ತು ಕೀಲು ಸಂಬಂಧಿತ ಸಮಸ್ಯೆಗಳಿಗೆ ಚಿಕಿತ್ಸೆ ನೀಡುತ್ತಿರುವ ಡಾ. ಶ್ರೀನಿವಾಸ್ ಅವರು, ಪ್ರತಿಯೊಬ್ಬ ರೋಗಿಯ ಆರೋಗ್ಯ ಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿ ಸೂಕ್ತ ಚಿಕಿತ್ಸಾ ಯೋಜನೆಯನ್ನು ರೂಪಿಸುತ್ತಾರೆ. ಚಿಕಿತ್ಸೆಯ ಜೊತೆಗೆ ರೋಗದ ಕಾರಣ, ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು, ಔಷಧೋಪಚಾರ, ವ್ಯಾಯಾಮ ಹಾಗೂ ಪುನರ್ವಸತಿ ಕುರಿತು ವಿವರವಾಗಿ ಮಾಹಿತಿ ನೀಡುವುದು ಅವರ ಚಿಕಿತ್ಸಾ ಶೈಲಿಯ ವಿಶೇಷತೆ ಎಂದು ಹೇಳಲಾಗುತ್ತಿದೆ.

ಆಸ್ಪತ್ರೆಗೆ ಭೇಟಿ ನೀಡುವ ಅನೇಕ ರೋಗಿಗಳು, ವೈದ್ಯರ ಸರಳ ನಡೆ–ನುಡಿ, ತಾಳ್ಮೆಯಿಂದ ಸಮಸ್ಯೆ ಆಲಿಸುವ ಗುಣ ಮತ್ತು ಆತ್ಮವಿಶ್ವಾಸ ತುಂಬುವ ಮಾತುಗಳು ಚಿಕಿತ್ಸೆಯ ಮೇಲಿನ ನಂಬಿಕೆಯನ್ನು ಹೆಚ್ಚಿಸುತ್ತವೆ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ರೋಗಿಗಳ ಪ್ರತಿಯೊಂದು ಪ್ರಶ್ನೆಗೆ ಸಮಯ ನೀಡಿ ಸ್ಪಷ್ಟ ಉತ್ತರ ನೀಡುವುದು, ಅನಗತ್ಯ ಆತಂಕವನ್ನು ದೂರ ಮಾಡಿ ಧೈರ್ಯ ತುಂಬುವುದು ಅವರ ಸೇವೆಯ ಪ್ರಮುಖ ಅಂಶವಾಗಿದೆ ಎಂದು ಹಲವರು ಹೇಳಿದ್ದಾರೆ.

ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಬಳಸಿಕೊಂಡು ನಿಖರ ರೋಗನಿರ್ಣಯ ಮತ್ತು ಗುಣಮಟ್ಟದ ಚಿಕಿತ್ಸೆಯನ್ನು ಒದಗಿಸುವುದರ ಜೊತೆಗೆ, ಶಸ್ತ್ರಚಿಕಿತ್ಸೆ ಅಗತ್ಯವಿರುವ ಹಾಗೂ ಅಗತ್ಯವಿಲ್ಲದ ಪ್ರಕರಣಗಳನ್ನು ಸೂಕ್ತವಾಗಿ ಮೌಲ್ಯಮಾಪನ ಮಾಡಿ ಚಿಕಿತ್ಸೆಯನ್ನು ಶಿಫಾರಸು ಮಾಡುವುದು ಅವರ ವೃತ್ತಿಪರ ನಿಷ್ಠೆಗೆ ಸಾಕ್ಷಿಯಾಗಿದೆ ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ.

ಮಾನವೀಯತೆ, ನಿಷ್ಠೆ ಮತ್ತು ಸೇವಾ ಮನೋಭಾವವನ್ನು ತಮ್ಮ ವೈದ್ಯಕೀಯ ಸೇವೆಯ ಕೇಂದ್ರಬಿಂದುವಾಗಿಸಿಕೊಂಡಿರುವ ಡಾ. ಶ್ರೀನಿವಾಸ್ ಅವರು, ಆರೋಗ್ಯಕರ ಸಮಾಜ ನಿರ್ಮಾಣದ ಉದ್ದೇಶದೊಂದಿಗೆ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಗುಣಮಟ್ಟದ ಆರೋಗ್ಯ ಸೇವೆ, ರೋಗಿಗಳೊಂದಿಗೆ ಆತ್ಮೀಯ ಸಂವಹನ ಮತ್ತು ಚಿಕಿತ್ಸೆಯ ಮೇಲಿನ ವಿಶ್ವಾಸ ಮೂಡಿಸುವ ಕಾರ್ಯದ ಮೂಲಕ ಅವರು ಸಾರ್ವಜನಿಕರ ಮೆಚ್ಚುಗೆ ಹಾಗೂ ವಿಶ್ವಾಸವನ್ನು ಗಳಿಸುತ್ತಿದ್ದಾರೆ ಎಂದು ಸ್ಥಳೀಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

## ಮಾನವೀಯ ಸೇವೆ ಮತ್ತು ರೋಗಿ ಸ್ನೇಹಿ ಚಿಕಿತ್ಸೆಯಿಂದ ಜನಮನ ಗೆದ್ದ ಖ್ಯಾತ ಫಿಜಿಷಿಯನ್ ಹಾಗೂ ಡಯಾಬಿಟಾಲಜಿಸ್ಟ್ ಡಾ. ವಿ. ಸುರೇಶ್

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಆರೋಗ್ಯ ಸೇವೆಯನ್ನು ಕೇವಲ ವೃತ್ತಿಯೆಂದು ಪರಿಗಣಿಸದೆ, ಸಮಾಜಸೇವೆಯ ಮಹತ್ತರ ಜವಾಬ್ದಾರಿಯಾಗಿ ಸ್ವೀಕರಿಸಿ ಸಾವಿರಾರು ರೋಗಿಗಳ ಬದುಕಿನಲ್ಲಿ ಹೊಸ ಆಶಾಕಿರಣ ಮೂಡಿಸಿರುವ ಖ್ಯಾತ ಫಿಜಿಷಿಯನ್ ಹಾಗೂ ಡಯಾಬಿಟಾಲಜಿಸ್ಟ್, ಬಳ್ಳಾರಿ ನಗರದ ಆರ್.ವಿ.ಜಿ. ಆಸ್ಪತ್ರೆಯ ಡಾ. ವಿ. ಸುರೇಶ್ ಅವರು ತಮ್ಮ ಮಾನವೀಯ ಸೇವೆ, ರೋಗಿ ಸ್ನೇಹಿ ನಡೆ ಹಾಗೂ ನಿಷ್ಠಾವಂತ ಚಿಕಿತ್ಸೆಯ ಮೂಲಕ ಸಾರ್ವಜನಿಕರ ಅಪಾರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ವೈದ್ಯಕೀಯ ಕ್ಷೇತ್ರದಲ್ಲಿ ಹಲವು ವರ್ಷಗಳ ಅನುಭವ ಹೊಂದಿರುವ ಡಾ. ಸುರೇಶ್ ಅವರು ಮಧುಮೇಹ, ರಕ್ತದೊತ್ತಡ ಸೇರಿದಂತೆ ವಿವಿಧ ದೀರ್ಘಕಾಲೀನ ಕಾಯಿಲೆಗಳ ಚಿಕಿತ್ಸೆಯಲ್ಲಿ ಪರಿಣತಿ ಹೊಂದಿದ್ದಾರೆ. ಪ್ರತಿಯೊಬ್ಬ ರೋಗಿಯ ಆರೋಗ್ಯ ಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿ, ವೈಯಕ್ತಿಕ ಅಗತ್ಯಕ್ಕೆ ಅನುಗುಣವಾದ ಚಿಕಿತ್ಸೆ ನೀಡುವ ಮೂಲಕ ಅವರು ವಿಶ್ವಾಸಾರ್ಹ ವೈದ್ಯರಾಗಿ ಹೆಸರು ಗಳಿಸಿದ್ದಾರೆ.

ರೋಗಿಗಳೊಂದಿಗೆ ಆತ್ಮೀಯವಾಗಿ ಸಂವಹನ ನಡೆಸುವುದು, ಅವರ ಆರೋಗ್ಯ ಸಮಸ್ಯೆಗಳನ್ನು ತಾಳ್ಮೆಯಿಂದ ಆಲಿಸುವುದು ಹಾಗೂ ವೈದ್ಯಕೀಯ ಮಾಹಿತಿಯನ್ನು ಸರಳ ಮತ್ತು ಸುಲಭ ಭಾಷೆಯಲ್ಲಿ ವಿವರಿಸಿ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು ಅವರ ವಿಶೇಷ ಗುಣವಾಗಿದೆ. ಇದೇ ಮಾನವೀಯ ನಡೆ ಅವರನ್ನು ಇತರ ವೈದ್ಯರಿಂದ ಭಿನ್ನರನ್ನಾಗಿಸಿದೆ.

ವೈದ್ಯಕೀಯ ಸೇವೆಯ ಜೊತೆಗೆ ಸಮಾಜದ ಆರೋಗ್ಯ ವೃದ್ಧಿಗೂ ಡಾ. ಸುರೇಶ್ ಅವರು ವಿಶೇಷ ಒತ್ತು ನೀಡುತ್ತಿದ್ದಾರೆ. ಉಚಿತ ಆರೋಗ್ಯ ತಪಾಸಣಾ ಶಿಬಿರಗಳು, ಆರೋಗ್ಯ ಜಾಗೃತಿ ಕಾರ್ಯಕ್ರಮಗಳು ಹಾಗೂ ಮಧುಮೇಹ ನಿಯಂತ್ರಣ ಕುರಿತು ಜನಜಾಗೃತಿ ಅಭಿಯಾನಗಳಲ್ಲಿ ಅವರು ನಿರಂತರವಾಗಿ ಸಕ್ರಿಯವಾಗಿ ಭಾಗವಹಿಸುತ್ತಿದ್ದು, ಸಮಾಜಮುಖಿ ವೈದ್ಯರಾಗಿ ಗುರುತಿಸಿಕೊಂಡಿದ್ದಾರೆ.

ಅವರ ಚಿಕಿತ್ಸೆ ಮತ್ತು ಸೂಕ್ತ ಆರೋಗ್ಯ ಮಾರ್ಗದರ್ಶನದಿಂದ ಅನೇಕ ರೋಗಿಗಳು ಉತ್ತಮ ಆರೋಗ್ಯವನ್ನು ಮರಳಿ ಪಡೆದಿದ್ದು, ಸಾರ್ವಜನಿಕರಿಂದ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದೆ. "ರೋಗಿಯ ಆರೋಗ್ಯವೇ ವೈದ್ಯನ ನಿಜವಾದ ಯಶಸ್ಸು" ಎಂಬ ಧ್ಯೇಯವಾಕ್ಯದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಅವರು, ಔಷಧೋಪಚಾರಕ್ಕೆ ಮಾತ್ರ ಸೀಮಿತವಾಗದೆ ಆರೋಗ್ಯಕರ ಜೀವನಶೈಲಿ, ಸಮತೋಲಿತ ಆಹಾರ ಪದ್ಧತಿ, ನಿಯಮಿತ ವ್ಯಾಯಾಮ ಹಾಗೂ ಮಧುಮೇಹ ನಿಯಂತ್ರಣದ ಬಗ್ಗೆ ನಿರಂತರವಾಗಿ ಮಾರ್ಗದರ್ಶನ ನೀಡುತ್ತಿದ್ದಾರೆ.

ಸೇವಾ ಮನೋಭಾವ, ವೃತ್ತಿಪರ ನಿಷ್ಠೆ, ಮಾನವೀಯ ಮೌಲ್ಯಗಳು ಹಾಗೂ ರೋಗಿಗಳ ಮೇಲಿನ ಅಪಾರ ಕಾಳಜಿಯಿಂದ ಡಾ. ವಿ. ಸುರೇಶ್ ಅವರು ಇಂದು ಸಾವಿರಾರು ಕುಟುಂಬಗಳ ವಿಶ್ವಾಸ ಗಳಿಸಿರುವ ವೈದ್ಯರಾಗಿ ಹೊರಹೊಮ್ಮಿದ್ದಾರೆ. ಅವರ ಸೇವೆ ಇದೇ ರೀತಿಯಲ್ಲಿ ನಿರಂತರವಾಗಿ ಮುಂದುವರಿದು ಇನ್ನಷ್ಟು ಜನರ ಬದುಕಿಗೆ ಆರೋಗ್ಯದ ಬೆಳಕಾಗಲಿ ಎಂದು ಸಾರ್ವಜನಿಕರು ಹಾರೈಸುತ್ತಿದ್ದಾರೆ.

## ಮುಂಗಾರು ಹಂಗಾಮು: ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ನೋಂದಣಿ ಆರಂಭ - ಜು. 31 ಕೊನೆಯ ದಿನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಪ್ರಸ್ತಕ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾಯೋಜನೆಯಡಿ ನೋಂದಾಯಿಸಿಕೊಳ್ಳಲು ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ತೋಟಗಾರಿಕೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಮುಂಗಾರು ಹಂಗಾಮಿನ ಅಧಿಸೂಚಿತ ಘಟಕಗಳಲ್ಲಿ ಸಂಭವಿಸಬಹುದಾದ ಹವಾಮಾನ ವೈಪರೀತ್ಯಗಳಾದ ಅಧಿಕ ಮಳೆ, ನೆರೆ/ಪ್ರವಾಹ, ಬೆಳೆ ಮುಳುಗಡೆ, ದೀರ್ಘಕಾಲದ ತೇವಾಂಶ ಕೊರತೆ, ತೀವ್ರ ಬರಗಾಲ ಹಾಗೂ ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳಾದ ಆಲಿಕಲ್ಲು ಮಳೆ, ಮೇಘಸ್ಫೋಟ, ನೈಸರ್ಗಿಕ ಬೆಂಕಿ ಅವಗಡಗಳಿಂದ ಮತ್ತು ಕೊಯ್ಲೋತ್ತರ ನಷ್ಟಗಳಿಂದ ಬೆಳೆ ಹಾನಿ ಉಂಟಾದಲ್ಲಿ ನಿಯಮಾನುಸಾರ ವಿಮಾ ಸಂಸ್ಥೆಗಳ ಮೂಲಕ ಬೆಳೆ ನಷ್ಟ ಪರಿಹಾರವನ್ನು ರೈತರಿಗೆ ಒದಗಿಸುವ ಪ್ರಮುಖ ಉದ್ದೇಶವಾಗಿದೆ.

ಪ್ರಸ್ತುತ ಸಾಲಿನ ಮುಂಗಾರು ಹಂಗಾಮಿಗೆ ಕೆಂಪು ಮೆಣಸಿನಕಾಯಿ (ನೀರಾವರಿ) ಮತ್ತು ಈರುಳ್ಳಿ (ನೀರಾವರಿ) ಬೆಳೆಗಳನ್ನು ವಿಮಾ ಯೋಜನೆಯಡಿ ಒಳಪಡಿಸಲಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಎಸ್.ಬಿ.ಐ ಜನರಲ್ ಇನ್ಶೂರೆನ್ಸ್ ಕಂಪನಿ ವಿಮಾ ಸಂಸ್ಥೆಯಾಗಿ ಆಯ್ಕೆಯಾಗಿರುತ್ತದೆ.

*ಬೆಳೆವಾರು ವಿಮಾ ವಿವರ:*

*ಕೆಂಪು ಮೆಣಸಿನಕಾಯಿ (ನೀರಾವರಿ):* ಪ್ರತಿ ಹೆಕ್ಟೇರ್ ಗೆ ರೂ. 1,24,500 ವಿಮಾ ಮೊತ್ತ ನಿಗದಿಯಾಗಿದ್ದು, ರೈತರು ಶೇ.5 ರಷ್ಟು ಪ್ರೀಮಿಯಂ ಮೊತ್ತ ರೂ. 6,225 ಪಾವತಿಸಬೇಕಿರುತ್ತದೆ. (ಒಳಪಡುವ ಹೋಬಳಿಗಳು: ಕಂಪ್ಲಿ, ಕುರುಗೋಡು, ಕೋಳೂರು, ಬಳ್ಳಾರಿ, ಮೋಕಾ, ರೂಪನಗುಡಿ, ಸಿರುಗುಪ್ಪ, ಕರೂರು, ತೆಕ್ಕಲಕೋಟೆ, ಹಚ್ಚೊಳ್ಳಿ, ಸಂಡೂರು, ತೋರಣಗಲ್ಲು).

*ಈರುಳ್ಳಿ (ನೀರಾವರಿ):* ಪ್ರತಿ ಹೆಕ್ಟೇರ್ ಗೆ ರೂ. 93,900 ವಿಮಾ ಮೊತ್ತ ನಿಗದಿಯಾಗಿದ್ದು, ರೈತರು ಶೇ.5 ರಷ್ಟು ಪ್ರೀಮಿಯಂ ಮೊತ್ತ ರೂ. 4,695 ಪಾವತಿಸಬೇಕಿರುತ್ತದೆ. (ಒಳಪಡುವ ಹೋಬಳಿಗಳು: ಸಂಡೂರು, ಚೋರನೂರು, ತೋರಣಗಲ್ಲು).

*ನೋಂದಣಿ ಕೇಂದ್ರಗಳು ಹಾಗೂ ಅಗತ್ಯ ದಾಖಲೆಗಳು:*

ಅರ್ಹ ರೈತರು ಬ್ಯಾಂಕ್, ಸಾಮಾನ್ಯ ಸೇವಾ ಕೇಂದ್ರ, ಗ್ರಾಮ ಒನ್ ಅಥವಾ ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರಿ ಸಂಘಗಳಲ್ಲಿ ವಿಮೆ ನೋಂದಾಯಿಸಿಕೊಳ್ಳಬಹುದು. ನೋಂದಣಿಗೆ ಇತ್ತೀಚಿನ ಪಹಣಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಸ್ವಯಂ ದೃಢೀಕರಣ ಪತ್ರ ಹಾಗೂ ಎಫ್.ಐ.ಡಿ ದಾಖಲೆಗಳು ಅತ್ಯಗತ್ಯವಾಗಿವೆ.

ಅರ್ಜಿ ಸಲ್ಲಿಸಲು ಜುಲೈ 31 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.), ಬಳ್ಳಾರಿ, ಕಂಪ್ಲಿ, ಕುರುಗೋಡು: 08392–278177, 9480257282, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.), ಸಂಡೂರು: 08395–260389, 9740934208, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.), ಸಿರುಗುಪ್ಪ: 08396–222066, 9448910277 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕರಾಮುವಿ: ಪ್ರವೇಶಾತಿ ಪ್ರಾರಂಭ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಶೈಕ್ಷಣಿಕ ವರ್ಷ 2026–27ರ ಜುಲೈ ಆವೃತ್ತಿಯ ಪ್ರವೇಶಾತಿ ಪ್ರಕ್ರಿಯೆಯನ್ನು ಆರಂಭಿಸಿದೆ. ಯುಜಿಸಿ ಅನುಮೋದಿತ ವಿವಿಧ ಪದವಿ, ಸ್ನಾತಕೋತ್ತರ ಪದವಿ (ಎಂ.ಎಸ್.ಡಬ್ಲ್ಯೂ , ಎಂ.ಲಿಬ್.ಐ.ಎಸ್ಸಿ.), ಪಿಜಿ ಸರ್ಟಿಫಿಕೇಟ್, ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಶಿಕ್ಷಣಕ್ರಮಗಳಿಗೆ ಈಗಾಗಲೇ ಆನ್‌ಲೈನ್ ಮೂಲಕ ಪ್ರವೇಶಾತಿ ಪ್ರಾರಂಭವಾಗಿದೆ ಎಂದು ಬಳ್ಳಾರಿ ಪ್ರಾದೇಶಿಕ ಕೇಂದ್ರದ ಪ್ರಾದೇಶಿಕ ನಿರ್ದೇಶಕ ನಾಗೇಶ್ ಎಂ. ಅವರು ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 15 ಕೊನೆಯ ದಿನವಾಗಿದೆ. ಅರ್ಜಿ ಸಲ್ಲಿಸಲು ಅಧಿಕೃತ ವೆಬ್‌ಸೈಟ್ ತಿತಿತಿ.ಇಾಂಣಟಥಿಣಡಿಣ.ಚಿಛಿ.ಟಿ ಗೆ ಭೇಟಿ ನೀಡಬಹುದಾಗಿದೆ.

ವಿಶೇಷ ಶುಲ್ಕ ವಿನಾಯಿತಿ ಮತ್ತು ರಿಯಾಯಿತಿಗಳು:

ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳಿಗೆ, ಡಿಫೆನ್ಸ್ / ಎಕ್ಸ್ ಸರ್ವೀಸ್‌ಮನ್ ಅಭ್ಯರ್ಥಿಗಳಿಗೆ, ಆಟೋ ಮತ್ತು ಕ್ಯಾಬ್ ಚಾಲಕರು ಹಾಗೂ ಅವರ ಮಕ್ಕಳಿಗೆ ಬೋಧನಾ ಶುಲ್ಕದಲ್ಲಿ ವಿಶೇಷ ರಿಯಾಯಿತಿ ಇರಲಿದೆ.

ಕೋವಿಡ್‌ನಿಂದಾಗಿ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ, ದೃಷ್ಟಿಹೀನ ವಿದ್ಯಾರ್ಥಿಗಳಿಗೆ ಹಾಗೂ ತೃತೀಯ ಲಿಂಗಿಗಳಿಗೆ ಸಂಪೂರ್ಣ ಶುಲ್ಕ ವಿನಾಯಿತಿ ನೀಡಲಾಗುವುದು.

ಅರ್ಜಿ ಸಲ್ಲಿಸುವಾಗ ಯಾವುದೇ ತಾಂತ್ರಿಕ ತೊಂದರೆಗಳು ಎದುರಾದಲ್ಲಿ ವಿದ್ಯಾರ್ಥಿಗಳು ಆನ್‌ಲೈನ್ ಸಹಾಯವಾಣಿ ಮೊ.8800335638 / 8690544544 ಹಾಗೂ ಹೆಚ್ಚಿನ ಮಾಹಿತಿಗಾಗಿ ಮೊ.9986696487 ಗೆ ಸಂಪರ್ಕಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಕರಾಮುವಿ ಪ್ರಾದೇಶಿಕ ಕೇಂದ್ರ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ಪ್ರಾದೇಶಿಕ ವಿಜ್ಞಾನ ಕೇಂದ್ರದ ಹಿಂಭಾಗ, ನಲ್ಲಚೆರವು ಪ್ರದೇಶ, ಬಳ್ಳಾರಿ–02 ಇಲ್ಲಿಗೆ ಖುದ್ದಾಗಿ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಡೂರು ತಾಲೂಕಿನ ಕಾಳಂಗೇರಿ ಕಲ್ಲು ಗಣಿಗಾರಿಕೆ ಯೋಜನೆ ಜುಲೈ 30 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಸಂಡೂರು ತಾಲೂಕಿನ ಕಾಳಂಗೇರಿ ಗ್ರಾಮದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಎರಡು ಪ್ರತ್ಯೇಕ ಕಟ್ಟಡ ಕಲ್ಲು ಗಣಿಗಾರಿಕೆ ಯೋಜನೆಗಳ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸಾರ್ವಜನಿಕರಿಂದ ಅಭಿಪ್ರಾಯ ಹಾಗೂ ಆಕ್ಷೇಪಣೆಗಳನ್ನು ಆಲಿಸಲು ಜುಲೈ 30 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

*ಯೋಜನೆಯ ವಿವರ:*

ಕಾಳಂಗೇರಿ ಗ್ರಾಮದ ಸರ್ವೆ ನಂ. 240 ರಲ್ಲಿ ಹಿರೇಮಠ ಕುಮಾರಸ್ವಾಮಿ ಹಾಗೂ ಕಾಳಂಗೇರಿ ಮಲ್ಲಿಕಾರ್ಜುನ ಅವರು ತಲಾ 2.50 ಎಕರೆ (1.012 ಹೆಕ್ಟೇರ್) ಪ್ರದೇಶದಲ್ಲಿ ವಾರ್ಷಿಕ 60,000 ಟನ್ ಸಾಮರ್ಥ್ಯದ ಕಟ್ಟಡ ಕಲ್ಲು ಗಣಿಗಾರಿಕೆ ಯೋಜನೆಯನ್ನು ಕೈಗೊಳ್ಳಲು ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಎರಡೂ ಗುತ್ತಿಗೆ ಪ್ರದೇಶಗಳು ಪರಸ್ಪರ 500 ಮೀಟರ್ ಒಳಗಿನ ಅಂತರದಲ್ಲಿರುವುದರಿಂದ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ವೈಪರೀತ್ಯ ಸಚಿವಾಲಯದ ನಿಯಮಾವಳಿಗಳ ಪ್ರಕಾರ ಇದನ್ನು 'ಕ್ಲಸ್ಟರ್ ಪ್ರದೇಶ' ಎಂದು ಪರಿಗಣಿಸಲಾಗಿದೆ.

ಹಾಗಾಗಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರ ಅಧ್ಯಕ್ಷತೆಯಲ್ಲಿ ಜುಲೈ 30–ರಂದು ಮಧ್ಯಾಹ್ನ 03 ಗಂಟೆಗೆ ಯೋಜನೆ ನಡೆಯುವ ಪ್ರದೇಶ (ಕಾಳಂಗೇರಿ ಗ್ರಾಮ, ಸರ್ವೆ ನಂ. 240, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ) ಇಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ಆಯೋಜಿಸಲಾಗಿದೆ.

ಸಂಬಂಧಪಟ್ಟ ಗ್ರಾಮಸ್ಥರು ಹಾಗೂ ಸಾರ್ವಜನಿಕರು ಈ ಸಭೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬಹುದಾಗಿದೆ ಎಂದು ಬಳ್ಳಾರಿಯ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಚೇರಿಯ ಪರಿಸರ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಬಳ್ಳಾರಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ (ಸಾಮಾನ್ಯ ಪದವಿ ಕೋರ್ಸಿನ ಬಾಲಕ ಮತ್ತು ಬಾಲಕಿಯರ) ವಿದ್ಯಾರ್ಥಿನಿಲಯಗಳ ಹೊಸ ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ 2026–27ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳು ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದೆ.

*ಪೋಷಕರ ವಾರ್ಷಿಕ ಆದಾಯದ ಮಿತಿ:*

ಪ್ರವರ್ಗ–1, ಎಸ್.ಸಿ. ಮತ್ತು ಎಸ್.ಟಿ ವಿದ್ಯಾರ್ಥಿಗಳಿಗೆ ಗರಿಷ್ಠ ರೂ. 2.50 ಲಕ್ಷ. ಪ್ರವರ್ಗ–2ಎ, 2ಬಿ, 3ಎ, 3ಬಿ ಮತ್ತು ಇತರೆ ಹಿಂದುಳಿದ ವರ್ಗದವರಿಗೆ ಗರಿಷ್ಠ ರೂ. 1 ಲಕ್ಷ.

ಅರ್ಹ ವಿದ್ಯಾರ್ಥಿಗಳು https://ssp.karnataka.gov.in ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕು. ಜುಲೈ 20 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ.

ಅರ್ಜಿ ಸಲ್ಲಿಸುವಾಗ ಯಾವುದೇ ತಾಂತ್ರಿಕ ತೊಂದರೆಗಳು ಎದುರಾದಲ್ಲಿ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಜಿಲ್ಲಾ/ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಮೊ.8050770004 ಗೆ ಸಂಪರ್ಕಿಸಬಹುದಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಣಜಿತ್‌ಪುರ ಇನ್‌ಫ್ರಾಸ್ಟ್ರಕ್ಚರ್ ವಿಸ್ತರಣೆ ಯೋಜನೆ ಜು. 30 ರಂದು ಪರಿಸರ ಸಾರ್ವಜನಿಕ ಅಹವಾಲು ಸಭೆ


• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯ ಸಂಡೂರು ತಾಲೂಕಿನ ರಣಜಿತ್‌ಪುರ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆ॥ರಣಜಿತ್‌ಪುರ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ತನ್ನ ಘಟಕದ ಬೃಹತ್ ವಿಸ್ತರಣಾ ಯೋಜನೆಗೆ ಮುಂದಾಗಿದ್ದು, ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಅಭಿಪ್ರಾಯ ಹಾಗೂ ಆಕ್ಷೇಪಣೆಗಳನ್ನು ಆಲಿಸಲು ಜುಲೈ 30 ರಂದು ಬೆಳಿಗ್ಗೆ 11 ಗಂಟೆಗೆ ಕಂಪನಿಯ ಯೋಜನಾ ಪ್ರದೇಶದಲ್ಲಿ ಪರಿಸರ ಸಾರ್ವಜನಿಕ ಅಹವಾಲು ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್. ಕೆ ಅವರ ಅಧ್ಯಕ್ಷತೆಯಲ್ಲಿ ಸಭೆ ಜರುಗಲಿದೆ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಬಳ್ಳಾರಿ ಪ್ರಾದೇಶಿಕ ಕಚೇರಿಯ ಪರಿಸರ ಅಧಿಕಾರಿಗಳು ತಿಳಿಸಿದ್ದಾರೆ. *ವಿಸ್ತರಣಾ ಯೋಜನೆಯ ಅಂಶಗಳು:*

ಉತ್ಪಾದನಾ ಸಾಮರ್ಥ್ಯ ಹೆಚ್ಚಳ: ಪ್ರಸ್ತುತ ಇರುವ ಸ್ಪಾಂಜ್ ಐರನ್ ಘಟಕ ಮತ್ತು ಬೆನಿಫಿಷಿಯೇಷನ್ ಘಟಕದ ಸಾಮರ್ಥ್ಯವನ್ನು ದಿನಕ್ಕೆ 190 ಟನ್‌ನಿಂದ 375 ಟಿಪಿಡಿ ಗೆ ವಿಸ್ತರಿಸಲು ಉದ್ದೇಶಿಸಲಾಗಿದೆ.

ಬೆನಿಫಿಷಿಯೇಷನ್ ಘಟಕ: ಇದರ ಸಾಮರ್ಥ್ಯವನ್ನು ವರ್ಷಕ್ಕೆ 0.48 ಮಿಲಿಯನ್ ಟನ್‌ನಿಂದ 1.180 ಎಂಟಿಪಿಎ ಗೆ ಹೆಚ್ಚಿಸಿ, 0.05 ಎಂಟಿಪಿಎ ಶುದ್ಧೀಕರಿಸಿದ ಮ್ಯಾಂಗನೀಸ್ ಹಾಗೂ 1.13 ಎಂಟಿಪಿಎ ಶುದ್ಧೀಕರಿಸಿದ ಕಬ್ಬಿಣದ ಅದಿರನ್ನು ಉತ್ಪಾದಿಸಲು ಯೋಜಿಸಲಾಗಿದೆ. ಹೊಸ ಘಟಕಗಳ ಸ್ಥಾಪನೆ: ವಿಸ್ತರಣೆಯ ಭಾಗವಾಗಿ ಹೊಸದಾಗಿ 0.85 ಎಂಟಿಪಿಎ ಸಾಮರ್ಥ್ಯದ ಕಬ್ಬಿಣದ ಅದಿರಿನ ಪೆಲ್ಲೆಟ್ ಘಟಕ, 10000 Nm^3/Hr ಸಾಮರ್ಥ್ಯದ ಕೋಲ್ ಗ್ಯಾಸಿಫೈಯರ್ ಘಟಕ ಹಾಗೂ 10 ಎಂಡಬ್ಲ್ಯೂ ಸಾಮರ್ಥ್ಯದ ಸಹ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಭೂಮಿ ಬಳಕೆ: ಪ್ರಸ್ತುತ ಈ ಘಟಕವು ರಣಜಿತ್‌ಪುರ ಗ್ರಾಮದ ವಿವಿಧ ಸರ್ವೆ ನಂಬರ್‌ಗಳ ಒಟ್ಟು 86.18 ಹೆಕ್ಟೇರ್ ಪ್ರದೇಶದಲ್ಲಿದ್ದು, ವಿಸ್ತರಣೆಗಾಗಿ ಹೆಚ್ಚುವರಿಯಾಗಿ 10.84 ಹೆಕ್ಟೇರ್ ಭೂಮಿಯನ್ನು ಬಳಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ಯೋಜನೆಯ ಒಟ್ಟು ವಿಸ್ತೀರ್ಣ 94.63 ಹೆಕ್ಟೇರ್ ಆಗಲಿದೆ. ಹಾಗಾಗಿ ಪರಿಸರ ಆಘಾತ ಅಧ್ಯಯನ ಅಧಿಸೂಚನೆ ನಿಯಮಾವಳಿಗಳ ಅನ್ವಯ ಈ ಸಭೆಯನ್ನು ಕರೆಯಲಾಗಿದ್ದು, ಸಾರ್ವಜನಿಕರು ಹಾಗೂ ಆಸಕ್ತರು ಸಭೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಷ್ಟ್ರೀಯ ಸಂಖ್ಯಾಶಾಸ್ತ್ರ ದಿನ




• ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ

ಒಬ್ಬ ಸಾಮಾನ್ಯ ವ್ಯಕ್ತಿಯಿಂದ ಹಿಡಿದು ರಾಷ್ಟ್ರದ ಜೀವನಾಡಿವರೆಗೆ ಗಮನಿಸಿದಾಗ ಪ್ರತಿಯೊಬ್ಬರ ಬದುಕಿನ ಹಿಂದೆ ಅಂಕಿ ಅಂಶಗಳು ಜೀವನವನ್ನು ರೂಪಿಸುತ್ತವೆ. ರಾಷ್ಟ್ರೀಯ ಯೋಜನೆ, ನೀತಿ ರೂಪಣೆ ಹಾಗೂ ಸುಸ್ಥಿರ ಅಭಿವೃದ್ಧಿಯಲ್ಲಿ ಸಂಖ್ಯಾಶಾಸ್ತ್ರದ ಪಾತ್ರವಿದೆಯೆಂದು ಪ್ರಾ ಡಾ. ಎ. ವಿ. ಸೂರ್ಯವಂಶಿ ಹೇಳಿದರು.

ಪಟ್ಟಣದ ಬಿ.ಎಲ್.ಡಿ.ಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಪ್ರೊ ಪ್ರಶಾಂತಚಂದ್ರ ಮಹಲನೋಬಿಸ್ ಸ್ಮರಣಾರ್ಥ ರಾಷ್ಟ್ರೀಯ ಸಂಖ್ಯಾಶಾಸ್ತ್ರ ದಿನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡು ಮಾತನಾಡಿದರು,

ಸಂಖ್ಯಾಶಾಸ್ತ್ರ ವಿಭಾಗದ ಮುಖ್ಯಸ್ಥ ಪುಂಡಲೀಕ ಹೊರಕೇರಿ ಅವರು ವಿಶೇಷ ಉಪನ್ಯಾಸ ನೀಡುತ್ತ ಯಾರು ಜೀವನದಲ್ಲಿ ಮೇಲಿಂದ ಮೇಲೆ ಸೋಲುತ್ತಾರೋ ಎಡವುತ್ತಾರೋ ಅಂತವರಿಗೆ ಅಂಕಿ ಸಂಖ್ಯೆಯ ಶಿಸ್ತು ಗೊತ್ತಿಲ್ಲವೆಂದು ಹೇಳಿದರೆ ತಪ್ಪಾಗಲಾರದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕುಮಾರಿ ಆರ್. ಎಂ. ಮುಜಾವರ್ ನಿರೂಪಿಸಿದರು.

## ಮನೆ ಕಳೆದುಕೊಳ್ಳುವ ಭೀತಿಯಲ್ಲಿ ಬಡ ಕಾರ್ಮಿಕರು: ನ್ಯಾಯಕ್ಕಾಗಿ ಕರವೇ ಹೋರಾಟ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು



ಜೂ.30.ತುಂಗಭದ್ರಾ ಎಡದಂಡೆ ಕಾಲುವೆಯ 36ನೇ ಮೈಲಿ ವ್ಯಾಪ್ತಿಯಲ್ಲಿ ದಶಕಗಳಿಂದ ನೆಲೆಸಿರುವ ಬಡ ಕೃಷಿ ಕಾರ್ಮಿಕರನ್ನು ಯಾವುದೇ ಮುನ್ಸೂಚನೆ ಅಥವಾ ಪುನರ್ವಸತಿ ಇಲ್ಲದೆ ತೆರವುಗೊಳಿಸಲು ಮುಂದಾಗಿರುವ ನೀರಾವರಿ ಇಲಾಖೆಯ ಕ್ರಮವನ್ನು ಖಂಡಿಸಿ, ಕರ್ನಾಟಕ ರಕ್ಷಣಾ ವೇದಿಕೆಯ (ಹೆಚ್. ಶಿವರಾಮೇಗೌಡ ಬಣ) ತಾಲೂಕು ಘಟಕದ ನೇತೃತ್ವದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಗೋರೇಬಾಳದಿಂದ ವೆಂಕಟೇಶ್ವರ ಕ್ಯಾಂಪ್‌ವರೆಗಿನ ರಸ್ತೆ ಡಾಂಬರೀಕರಣ ಕಾಮಗಾರಿಯ ನೆಪದಲ್ಲಿ, ಅಲ್ಲಿನ ಕಾಲುವೆ ದಡದಲ್ಲಿ ಸುಮಾರು 40–50 ವರ್ಷಗಳಿಂದ ವಾಸಿಸುತ್ತಿರುವ ಬಡ ಕುಟುಂಬಗಳಿಗೆ ತೆರವುಗೊಳಿಸುವಂತೆ ನೀರಾವರಿ ಇಲಾಖೆ ನೋಟಿಸ್ ಜಾರಿ ಮಾಡಿದೆ. 3 ದಿನಗಳ ಒಳಗಾಗಿ ಮನೆಗಳನ್ನು ತೆರವುಗೊಳಿಸದಿದ್ದರೆ ಯಂತ್ರಗಳ ಮೂಲಕ ತೆರವು ಮಾಡುವುದಾಗಿ ಇಲಾಖೆ ಎಚ್ಚರಿಕೆ ನೀಡಿದೆ. ಇದನ್ನು ತೀವ್ರವಾಗಿ ವಿರೋಧಿಸಿರುವ ಕರವೇ ಕಾರ್ಯಕರ್ತರು ಮತ್ತು ಸ್ಥಳೀಯ ನಿವಾಸಿಗಳು, ಜೂನ್ 30ರಂದು ಗಾಂಧಿನಗರದ ಗಾಂಧಿ ವೃತ್ತದ ಬಳಿ ರಸ್ತೆ ತಡೆ ಮತ್ತು ಧರಣಿ ಸತ್ಯಾಗ್ರಹ ಹಮ್ಮಿಕೊಂಡಿದ್ದರು. ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಅಧ್ಯಕ್ಷ ಜಿ. ಸುರೇಶ ಗೊಬ್ಬರಕಲ್ ನೇತೃತ್ವದಲ್ಲಿ ನಡೆಸಿದ ಪ್ರತಿಭಟನೆಯಲ್ಲಿ, ಈ ಬಡ ಕುಟುಂಬಗಳಿಗೆ ನ್ಯಾಯ ಒದಗಿಸುವಂತೆ ಒತ್ತಾಯಿಸಲಾಯಿತು. ಅತೀ ಕಡಿಮೆ ಆದಾಯದ ಈ ಕುಟುಂಬಗಳಿಗೆ ಬೇರೆ ವಾಸಸ್ಥಳವಿಲ್ಲ. ಹೀಗಾಗಿ, ಮೊದಲಿಗೆ ಇವರಿಗೆ ಸೂಕ್ತ ಪುನರ್ವಸತಿ ಕಲ್ಪಿಸಿ ನಂತರವಷ್ಟೇ ತೆರವು ಕಾರ್ಯಾಚರಣೆ ಕೈಗೊಳ್ಳಬೇಕು.

ಇಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಗ್ರಾಮ ಪಂಚಾಯಿತಿಯಿಂದ ವಿದ್ಯುತ್ ಸಂಪರ್ಕ, ಕುಡಿಯುವ ನೀರು ಮತ್ತು ಸರ್ಕಾರದ ವಸತಿ ಯೋಜನೆಗಳಡಿ ಶೌಚಾಲಯ ನಿರ್ಮಿಸಿಕೊಡಲಾಗಿದೆ. ಇಷ್ಟೇ ಅಲ್ಲದೆ, ಈ ಕುಟುಂಬಗಳು ಗ್ರಾಮ ಪಂಚಾಯಿತಿಗೆ ಕಂದಾಯವನ್ನೂ ಪಾವತಿಸುತ್ತಿವೆ. ಹೀಗಿರುವಾಗ, ಇದ್ದಕ್ಕಿದ್ದಂತೆ ಇದನ್ನು 'ಅನಧಿಕೃತ' ಎಂದು ಘೋಷಿಸಿ ತೆರವು ಮಾಡುವುದು ಕಾನೂನುಬಾಹಿರ ಮತ್ತು ಅಮಾನವೀಯ ಎಂದು ಸಂಘಟನೆ ಆಕ್ರೋಶ ವ್ಯಕ್ತಪಡಿಸಿದೆ. ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಪೆಟ್ರೋಲ್ ಬಂಕ್‌ವರೆಗೆ ಮಾತ್ರ ಸೀಮಿತಗೊಳಿಸುವ ಮೂಲಕ ಬಡ ಕುಟುಂಬಗಳನ್ನು ಸ್ಥಳಾಂತರಿಸುವ ಅಗತ್ಯವಿಲ್ಲದೆ ಕಾಮಗಾರಿ ಪೂರ್ಣಗೊಳಿಸಬಹುದು ಎಂದು ಸಂಘಟನೆ ಸಲಹೆ ನೀಡಿದೆ. ತರಾತುರಿಯಲ್ಲಿ ಯಾವುದೇ ಮುನ್ಸೂಚನೆಯಿಲ್ಲದೆ ಬಡವರನ್ನು ಬೀದಿ ಪಾಲು ಮಾಡುವುದನ್ನು ನಿಲ್ಲಿಸಬೇಕು. ಅಧಿಕಾರಿಗಳು ಸ್ಥಳಕ್ಕೆ ಬಂದು ಸ್ಥಳೀಯರ ಅಹವಾಲುಗಳನ್ನು ಆಲಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದ್ದಾರೆ. ಸ್ಥಳೀಯ ನಿವಾಸಿಗಳು ಮತ್ತು ಕರವೇ ಪದಾಧಿಕಾರಿಗಳು ಈ ಅಮಾನವೀಯ ಕ್ರಮದ ವಿರುದ್ಧ ಹೋರಾಟವನ್ನು ಮುಂದುವರಿಸುವುದಾಗಿ ಎಚ್ಚರಿಸಿದ್ದಾರೆ. ಈ ಸಂದರ್ಭದಲ್ಲಿ ತಾಲೂಕ ಅಧ್ಯಕ್ಷ ಜಿ. ಸುರೇಶ್ ಗೊಬ್ಬರಕಲ್, ಹನುಮೇಶ ತಿಪ್ಪನಹಟ್ಟಿ ಉಪಾಧ್ಯಕ್ಷರು, ಆಂಜನೇಯ ದೇಸಾಯಿ ನ. ಘ ಅಧ್ಯಕ್ಷರು, ಮೆಹಬೂಬ್ ಸಾಬ್, ಬಾಬಾ ಕಲಂದರ್, ಖಾದರ್ ಖಾನ್ ಸಾಬ್, ಬಸವರಾಜ ಹೂಗಾರ, ಮಂಜುನಾಥ್ ನಾಯಕ, ಹನುಮಂತ, ಬಂದನೇವಾಜ್, ಪವನ್ , ಕೂಲಿ ಕಾರ್ಮಿಕರು ಮತ್ತು ಮಹಿಳೆಯರು ಸೇರಿದಂತೆ ಇತರು ಭಾಗವಹಿಸಿದರು.

# ಯುವಕರನ್ನು ನುಂಗುತ್ತಿರುವ ಅಕ್ರಮ ಮದ್ಯ: ಕಣ್ಮುಚ್ಚಿದೆಯೇ ಅಬಕಾರಿ ಇಲಾಖೆ?

**ಗುರುಮಠಕಲ್:** ತಾಲೂಕಿನಾದ್ಯಂತ ಅನಧಿಕೃತ ಮದ್ಯ ಮಾರಾಟ ದಿನದಿಂದ ದಿನಕ್ಕೆ ಮಿತಿ ಮೀರುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕಾದ ಅಬಕಾರಿ ಇಲಾಖೆ ನಿರ್ಲಕ್ಷ್ಯ ವಹಿಸಿದೆ ಎಂಬ ಆರೋಪ ಸಾರ್ವಜನಿಕರಿಂದ ಕೇಳಿಬರುತ್ತಿದೆ. ತೆಲಂಗಾಣ ರಾಜ್ಯದ ಗಡಿಭಾಗಕ್ಕೆ ಹೊಂದಿಕೊಂಡಿರುವ ಗುರುಮಠಕಲ್ ತಾಲೂಕಿನಲ್ಲಿ ಗಡಿಯಾಚೆಯಿಂದ ಮದ್ಯ ತಂದು ಅಕ್ರಮವಾಗಿ ಮಾರಾಟ ಮಾಡಲಾಗುತ್ತಿದೆ ಎನ್ನಲಾಗಿದೆ. ಪಾನ್‌ಬೀಡಾ ಅಂಗಡಿಗಳು, ಕಿರಾಣಿ ಮಳಿಗೆಗಳು ಸೇರಿದಂತೆ ಹಲವೆಡೆ ಯಾವುದೇ ಸಮಯದಲ್ಲೂ ಮದ್ಯ ಸುಲಭವಾಗಿ ದೊರೆಯುತ್ತಿದೆ ಎಂಬ ದೂರುಗಳು ವ್ಯಕ್ತವಾಗಿವೆ. ಇದರ ಜೊತೆಗೆ ಪೌಡರ್ ಬೆರೆಸಿದ ಹೆಂಡ ಹಾಗೂ ನಕಲಿ ಮದ್ಯ ಮಾರಾಟವೂ ನಡೆಯುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬರುತ್ತಿದ್ದು, ಸಂಬಂಧಪಟ್ಟ ಇಲಾಖೆಗಳು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಕಳೆದ ಒಂದು ತಿಂಗಳಿನಿಂದ ಮೊಹರಂ ಹಾಗೂ ಕಾರ ಹುಣ್ಣಿಮೆ ಹಬ್ಬಗಳ ಹಿನ್ನೆಲೆ ಮದ್ಯದ ಅಕ್ರಮ ಮಾರಾಟ ಮತ್ತು ಸೇವನೆ ಮತ್ತಷ್ಟು ಹೆಚ್ಚಾಗಿದೆ ಎಂದು ಸ್ಥಳೀಯರು ಹೇಳುತ್ತಿದ್ದಾರೆ. ಮದ್ಯದ ಚಟಕ್ಕೆ ಯುವಕರು ಬಲಿಯಾಗುತ್ತಿರುವುದು ಹೆಚ್ಚುತ್ತಿದ್ದು, ಅವರ ಆರೋಗ್ಯ ಮತ್ತು ಭವಿಷ್ಯದ ಬಗ್ಗೆ ಪೋಷಕರಲ್ಲಿ ತೀವ್ರ ಆತಂಕ ಮೂಡಿಸಿದೆ. "ತಾಲೂಕಿನಾದ್ಯಂತ ನಡೆಯುತ್ತಿರುವ ಅನಧಿಕೃತ ಮದ್ಯ ಮಾರಾಟಕ್ಕೆ ಅಬಕಾರಿ ಇಲಾಖೆ ಯಾವಾಗ ಕಡಿವಾಣ ಹಾಕುತ್ತದೆ?" ಎಂಬ ಪ್ರಶ್ನೆಯನ್ನು ಸಾರ್ವಜನಿಕರು ಮುಂದಿಟ್ಟಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ, ಅಕ್ರಮ ಮದ್ಯ ಮಾರಾಟ ಹಾಗೂ ನಕಲಿ ಮದ್ಯ ಜಾಲದ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

# 3ಕ್ಕೆ ಜನಾಗ್ರಹ ಸಮಾವೇಶ



**ವಿಜಯಪುರ:** ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯ ಸಮಿತಿ ವತಿಯಿಂದ ಜುಲೈ 3ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ದಲಿತ ಜನಾಗ್ರಹ ಸಮಾವೇಶ ಹಾಗೂ ಅನಿರ್ದಿಷ್ಟ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಬೆಳಗಾವಿ ವಿಭಾಗೀಯ ಸಂಚಾಲಕ ಸಂಜು ಕಂಬಾಗಿ ತಿಳಿಸಿದರುರು.

ಸಮಾವೇಶದಲ್ಲಿ ವಿಜಯಪುರ ಜಿಲ್ಲೆಯಿಂದ ಸುಮಾರು 500, ಬೆಳಗಾವಿ ವಿಭಾಗದಿಂದ 3,500 ಹಾಗೂ ರಾಜ್ಯದ ವಿವಿಧ ಭಾಗಗಳಿಂದ ಸುಮಾರು 30 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು.

ಭೂಮಿ, ವಸತಿ, ಸರ್ಕಾರಿ ಉದ್ಯೋಗಗಳ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ, ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಏಕಗವಾಕ್ಷಿ ನೀತಿ, ಶಿಕ್ಷಣಕ್ಕೆ ಹೆಚ್ಚಿನ ಅನುದಾನ, ಭೂರಹಿತ ಕುಟುಂಬಗಳಿಗೆ ಭೂಮಿ, ಬೌದ್ಧ ಅಭಿವೃದ್ಧಿ ನಿಗಮಕ್ಕೆ ₹500 ಕೋಟಿ ಅನುದಾನ ಸೇರಿದಂತೆ ವಿವಿಧ ಬೇಡಿಕೆಗಳನ್ನು ಸರ್ಕಾರದ ಮುಂದಿಡಲಾಗುವುದು ಎಂದು ತಿಳಿಸಿದರು.

ದಲಿತರ ಅಭಿವೃದ್ಧಿಗೆ ಮೀಸಲಾದ ಹಣವನ್ನು ಮೂಲ ಉದ್ದೇಶಕ್ಕೇ ಬಳಸಬೇಕು, ಭೂ ಹಕ್ಕುಗಳನ್ನು ರಕ್ಷಿಸಬೇಕು, ವಸತಿ ಹಾಗೂ ಉದ್ಯೋಗದ ಸಮಸ್ಯೆಗಳನ್ನು ಶೀಘ್ರ ಪರಿಹರಿಸಬೇಕು ಎಂದು ಆಗ್ರಹಿಸಿದರು. ಇದೇ ವೇಳೆ, ಎಸ್‌ಐಆರ್ ರದ್ದುಗೊಳಿಸುವುದು, ಜಾತಿ ಜನಗಣತಿ ವರದಿ ಸಾರ್ವಜನಿಕಗೊಳಿಸುವುದು, ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳ ತನಿಖೆಗೆ ಅಗತ್ಯ ಮೂಲಸೌಕರ್ಯ ಒದಗಿಸುವುದು ಸೇರಿದಂತೆ ಒಟ್ಟು 19 ಬೇಡಿಕೆಗಳನ್ನು ಸರ್ಕಾರದ ಮುಂದೆ ಮಂಡಿಸಲಾಗುವುದು ಎಂದು ಹೇಳಿದರು.

ಪತ್ರಿಕಾ ಗೋಷ್ಠಿಯಲ್ಲಿ ಮಹಿಳಾ ರಾಜ್ಯ ಸಂಚಾಲಕಿ ಪ್ರತಿಭಾ ಹೊಸಮನಿ, ಜಿಲ್ಲಾ ಸಂಚಾಲಕರಾದ ಶಿವು ಮೇಲಿನಮನಿ,ಮಹಿಳಾ ಜಿಲ್ಲಾ ಸಂಚಾಲಾಕಿ ಸವಿತಾ ವಗ್ಗರಾ,ಶಂಕರ ಭಲುವಾದಿ, ಚೇತನ ತೋರವಿ, ವಿಶ್ವಾಶ ಕಾಂಬಳೆ,ಶಶಿಧರ ನಾಯ್ಕೋಡಿ ಇದ್ದರು.

# ಆರೋಗ್ಯಕ್ಕೆ ಆದ್ಯತೆ ಹೆಚ್ಚಲಿ




**ಬಳ್ಳಾರಿ:** ಪ್ರತಿಯೊಬ್ಬರೂ ಆರೋಗ್ಯ ಸಂರಕ್ಷಣೆಗಾಗಿ ಆದ್ಯತೆ ನೀಡಬೇಕಾದ ಅನಿವಾರ್ಯತೆ ಬಂದಿದೆ ಎಂದು ಡಾ. ಬಿ.ಕೆ. ಸುಂದರ್ ಅವರು ತಿಳಿಸಿದ್ದಾರೆ. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಸದಸ್ಯರುಗಳಿಗೆ 'ಆರೋಗ್ಯ ಮಹತ್ವ'ದ ಕುರಿತು ಅವರು ಮಂಗಳವಾರ ಮಾತನಾಡಿ, ಪ್ರತಿಯೊಬ್ಬರೂ ದೈಹಿಕ ಚಟುವಟಿಕೆಗಳಲ್ಲಿ ಕಡ್ಡಾಯವಾಗಿ ಪಾಲ್ಗೊಂಡು ಆರೋಗ್ಯವಂತರಾಗಲು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಮಯ – ಹಣ ಮತ್ತು ಜ್ಞಾನವನ್ನು ವಿನಿಯೋಗ ಮಾಡಲಾಗುತ್ತಿದೆ. ಆರೋಗ್ಯದ ಕಡೆ ಪ್ರತಿಯೊಬ್ಬರೂ ಗಮನ ನೀಡುತ್ತಿದ್ದಾರೆ ಎಂದರು.

ಆರೋಗ್ಯ ಸುಧಾರಣೆಗಾಗಿ ಪ್ರೇರಣೆ ನೀಡುವ ವ್ಯವಸ್ಥೆ ನಿರ್ಮಾಣವಾಗಿದೆ. ಆಹಾರ ಪದ್ಧತಿಯೂ ಬದಲಾಗಿದೆ. ಆದರೆ, ಆರೋಗ್ಯ ಸುಧಾರಣೆಯಲ್ಲಿ ನಿರಂತರತೆಯ ಅಗತ್ಯವಿದೆ ಎಂದರು.

ಒತ್ತಡ, ಜೀವನಶೈಲಿ, ಆಹಾರ, ಇನ್ನಿತರೆಗಳ ಕಾರಣ 'ಒಬೆಸಿಟಿ'– ಹೃದ್ರೋಗ; ಡಯಾಬಿಟಿಸ್ ಹೀಗೇ ಆರೋಗ್ಯ ಸಮಸ್ಯೆಗಳು ಅನೇಕರನ್ನು ಸಹಜವಾಗಿಯೇ ಕಾಡುತ್ತಿವೆ. ಈ ದಿನಗಳಲ್ಲಿ ಆರೋಗ್ಯ ಸುಧಾರಣೆಗೆ ದೈಹಿಕ ಶ್ರಮ ಅಗತ್ಯ ಎಂದರು. ಬಳ್ಳಾರಿ ಸೈಕ್ಲಿಸ್ಟ್ ಅಂಡ್ ರನ್ನರ್ಸ್ ಫೌಂಡೇಶನ್ ಆಗಸ್ಟ್ 2ರ ಭಾನುವಾರ ಏರ್ಪಡಿಸಿರುವ 'ಸ್ಟೀಲ್ ಸಿಟಿ ರನ್'' ನಲ್ಲಿ ಪ್ರತಿಯೊಬ್ಬರೂ ಪಾಲ್ಗೊಳ್ಳಬೇಕು ಎಂದರು. ಅಲ್ಲದೇ, ಡಾ.ಬಿ.ಕೆ. ಸುಂದರ್ ಅವರು, ಸಿಪಿಆರ್ ನಲ್ಲಿ ಲುಕ್, ಲಿಸನ್ ಅಂಡ್ ಫೀಲ್ ಮಾಡಬೇಕು. ಎದೆಯ ಮಧ್ಯಭಾಗದಲ್ಲಿ ಎದೆಯನ್ನು ಒತ್ತುವ ಕುರಿತು ಜಾಗೃತಿ ಮೂಡಿಸಿದರು. ಬಳ್ಳಾರಿ ಸೈಕ್ಲಿಸ್ಟ್ ಅಂಡ್ ರನ್ನರ್ಸ್ ಫೌಂಡೇಶನ್ ನ ಡಾ. ರವಿಶಂಕರ್ ಸಜ್ಜಲ್ ಅವರು, ದೈಹಿಕ ಚಟುವಟಿಕೆಗಳನ್ನು ನಡೆಸುವ ಮೂಲಕ ಪ್ರತಿಯೊಬ್ಬರೂ ಆರೋಗ್ಯ ಸುಧಾರಣೆ ಮಾಡಿಕೊಳ್ಳಬೇಕು ಎಂದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಹಾಗೂ ಗೌರವ ಕಾರ್ಯದರ್ಶಿಗಳಾದ ಕೆ. ಸಿ. ಸುರೇಶಬಾಬು ಅವರು ಡಾ. ಬಿ.ಕೆ. ಸುಂದರ್ ಅವರನ್ನು ಗೌರವಿಸಿದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷರಾದ ಎಸ್. ದೊಡ್ಡನಗೌಡ, ಉಪಾಧ್ಯಕ್ಷರಾದ ಸೊಂತ ಗಿರಿಧರ್, ವಿಶೇಷ ಆಹ್ವಾನಿತರು, ವಿಶೇಷ ಸಮನ್ವಯ ಸಮಿತಿ ಸದಸ್ಯರು ಸೇರಿದಂತೆ ಸಂಸ್ಥೆಯ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

# ಬರಸ್ಥಿತಿ ಸಮರ್ಥವಾಗಿ ನಿಭಾಯಿಸಲು ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಜಿಲ್ಲೆಯಲ್ಲಿ ಉಂಟಾಗಿರುವ ಮಳೆಯ ಕೊರತೆ ಹಾಗೂ ಬರದ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಲು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಮಂಗಳವಾರ ಮುಂಗಾರು ಮಳೆ ಅವಧಿಯ ಪೂರ್ವಸಿದ್ದತೆ ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿವಿಧ ಜಲಾಶಯಗಳಲ್ಲಿ ನೀರಿನ ಮಟ್ಟ ಕಡಿಮೆಯಾಗಿದೆ. ಕುಡಿಯುವ ನೀರು ಪೂರೈಸಲು ಜಿಲ್ಲೆಯ ಕೆಲವೊಂದು ಕಡೆ ಜುಲೈ 20 ಹಾಗೂ 28 ವರೆಗೆ ನೀರಿನ ಲಭ್ಯತೆ ಇದ್ದು, ತುರ್ತಾಗಿ ಸರಕಾರಿ, ಖಾಸಗಿ ಬೋರವೆಲ್, ಬಾವಿಗಳ ಗುರುತಿಸಿಕೊಂಡು ನಿಭಾಯಿಸಲು ಜಿಲ್ಲಾಧಿಕಾರಿಗಳು ಹಾಗೂ ಜಿಪಂ ಸಿಇಓ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲು ತಿಳಿಸಿದರು.

ಜಿಲ್ಲೆಯ ಯಾವುದೇ ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಅಗತ್ಯವಿದ್ದಲ್ಲಿ ಪರ್ಯಾಯ ನೀರು ಪೂರೈಕೆ ವ್ಯವಸ್ಥೆ ಕಲ್ಪಿಸಿ ನೀರಿನ ಮೂಲಗಳ



ಸ್ಥಿತಿಯನ್ನು ನಿರಂತರವಾಗಿ ಪರಿಶೀಸುವಂತೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ಬರಸ್ಥಿತಿ ನಿರ್ವಹಣೆಗೆ ಹಣದ ಕೊರತೆ ಇಲ್ಲ. ಜಿಲ್ಲಾಧಿಕಾರಿಗಳ ಖಾತೆಯಲ್ಲಿ 12 ಕೋಟಿ ರೂ. ಇದೆ. ಕುಡಿಯುವ ನೀರು ಸೇರಿದಂತೆ ಇತರೆ ಯಾವುದೇ ಸಮಸ್ಯೆಗಳಿಗೆ ಅಧಿಕಾರಿಗಳ ಮೊಬೈಲ್ ನಂಬರಿಗೆ ಕರೆ ಮಾಡಿದಲ್ಲಿ ಅವರ ಸಮಸ್ಯೆ ಆಲಿಸಿ ಸಮಜಾಯಿಸಿ ಉತ್ತರ ನೀಡುವ ಕೆಲಸವಾಗಬೇಕು. ಕರೆಗಳನ್ನು ಸ್ವೀಕರಿಸದೇ ಇದ್ದ ಅಧಿಕಾರಿಗಳ ವಿರುದ್ದ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

ಬರಸ್ಥಿತಿಯನ್ನು ಸಮರ್ಥವಾಗಿ ನಿರ್ವಹಿಸಲು ಎಲ್ಲ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ, ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಜನರಿಗೆ ಮಾನವೀಯತೆ ದೃಷ್ಠಿಯಿಂದ ನೀರು ಕೊಡುವ ಕೆಲಸವಾಗಬೇಕೆಂದು ತಿಳಿಸಿದ ಸಚಿವರು, ಗ್ರಾಮ ಮಟ್ಟದಲ್ಲಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಪರಿಶೀಲಿಸಿ ಒಂದು ತಿಂಗಳೊಳಗಾಗಿ ವರದಿ ಸಲ್ಲಿಸಬೇಕು. ಸಚಿವರು ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕು. ಬೇಜವಾಬ್ದಾರಿ ತೋರುವಂತಿಲ್ಲ. ಅಧಿಕಾರಿಗಳ ನಿರ್ವಹಣೆಯ ಜವಾಬ್ದಾರಿ ಜಿಲ್ಲಾಧಿಕಾರಿಗಳದ್ದಾಗಿದೆ ಎಂದರು.

ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಮೇವು ದಾಸ್ತಾನು, ಅಗತ್ಯವಿದ್ದರೆ ಮೇವು ಬ್ಯಾಂಕ್‌ಗಳ ಸ್ಥಾಪನೆ ಹಾಗೂ ಪಶುಸಂಗೋಪನಾ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದರು. ಈಗಾಗಲೇ ರೈತರು ಬಿತ್ತನೆ ಮಾಡಿದ್ದಾರೆ. ಜುಲೈ 15 ರೊಳಗಾಗಿ ಮಳೆಯಾಗುವ ಸಾಧ್ಯತೆ ಇದೆ ಎಂದು ವಿಜ್ಞಾನಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮಳೆಯಾಗದಿದ್ದಲ್ಲಿ ತಾಂತ್ರಿಕ ಮಾಹಿತಿಯೊಂದು ಪರ್ಯಾಯ ಮಾರ್ಗ ತಿಳಿಸಿ ರೈತರಿಗೆ ಯಾವುದೇ ರೀತಿಯಲ್ಲಿ ತೆ–ೂಂದರೆಯಾಗದಂತೆ ಕ್ರಮವಹಿಸಲು ತಿಳಿಸಿದರು.

ಸಚಿವರು, ಶಾಸಕರು ಸೇರಿದಂತೆ ಜಿಲ್ಲೆಯ ಇತರೆ ಜನಪ್ರತಿನಿಧಿಗಳು ಎಲ್ಲ ರೀತಿಯ ಬರಸ್ಥಿತಿ ನಿರ್ವಹಣೆಗೆ ನೀಡಲಾಗುತ್ತದೆ. ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಬೇಕು. ತಾಲೂಕಾವಾರು ಕುಡಿಯುವ ನೀರಿನ ಪರಿಸ್ಥಿತಿಯ ಬಗ್ಗೆ ಆ ವ್ಯಾಪ್ತಿಯ ಶಾಸಕರು ಹಾಗೂ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಉಪಸ್ಥಿತರಿದ್ದ ಜನಪ್ರತಿನಿದಿಗಳು ಅಧಿಕಾರಿಗಳಿಗೆ ಸಲಹೆ ಸೂಚನೆಗಳನ್ನು ನೀಡಿದರು. ಜಿಲ್ಲೆಯಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ನೀರಿನ ಸಮಸ್ಯೆ ಉಂಟಾಗಿದ್ದು, ಕೂಡಲೇ ಮೋಡಬಿತ್ತನೆ ಮಾಡಲು ಸರ್ಕಾರ ಮುಂದಾಗಬೇಕು ಎಂದು ಶಾಸಕ ಜೆ.ಟಿ.ಪಾಟೀಲ, ಸಿದ್ದು ಸವದಿ ಸಚಿವರ ಗಮನಕ್ಕೆ ತಂದಾಗ ಈ ಬಗ್ಗೆ ಗಮನಹರಿಸಲಾಗುವುದು ಎಂದು ಸಚಿವರು ತಿಳಿಸಿದರು.

ಸಭೆಯಲ್ಲಿ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಶಾಸಕರಾದ ಆರ್.ಬಿ.ತಿಮ್ಮಾಪೂರ, ವಿಜಯಾನಂದ ಕಾಶಪ್ಪನವರ, ಭೀಮಸೇನ ಚಿಮ್ಮನಕಟ್ಟಿ, ಉಮೇಶ ಮೇಟಿ, ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಸಿಇಓ ಗಜಾನನ ಬಾಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ವಪ್ನಿಲ್ ಅಹೀರೆ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ಹಜರತ್ ಖ್ವಾಜಾ ಬಂದೇ ನವಾಜ್ ದರ್ಗಾದಲ್ಲಿ ಸ್ಮರಣಾರ್ಥ ಸಭೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಐತಿಹಾಸಿಕ ಹಜರತ್ ಖ್ವಾಜಾ ಬಂದೇ ನವಾಜ್ ಗೇಸುದರಾಜ್ (ರ.ಅ) ದರ್ಗಾದಲ್ಲಿ ಶನಿವಾರ, ಮಗ್ರಿಬ್ ನಮಾಜಿನ ನಂತರ ಸಯ್ಯಿದುಶ್ ಶುಹದಾ ಹಜರತ್ ಇಮಾಮ್ ಹುಸೈನ್ (ರ.ಅ) ಅವರ ಶಹಾದತ್ ಸ್ಮರಣಾರ್ಥ ಮರ್ಕಝಿ ಜಲ್ಸಾ–ಎ–ಶಹಾದತ್ ಭವ್ಯವಾಗಿ ನಡೆಯಿತು.

ಈ ಕಾರ್ಯಕ್ರಮವನ್ನು ಮಜ್ಲಿಸ್ ಮುಹಿಬ್ಬಾನ್–ಎ–ಮುಸ್ತಫಾ ವ ಅಹ್ಲೆ ಬೈತ್ ವ ಅವ್ಲಿಯಾ–ಎ–ಕಿರಾಮ್, ಅಹ್ಲೆ ಸುನ್ನತ್ ವಲ್ ಜಮಾಅತ್, ಕಲಬುರಗಿ ವತಿಯಿಂದ, ಹಜರತ ಖ್ವಾಜಾ ಬಂದೇ ನವಾಜ್ ದರ್ಗಾದ ಸಜ್ಜಾದಾ ನಶೀನ್ ಹಾಫಿಜ ಡಾ. ಸಯ್ಯದ್ ಮುಹಮ್ಮದ್ ಅಲಿ ಅಲ್–ಹುಸ್ಸೇನಿ ಅವರ ಆಶ್ರಯದಲ್ಲಿ ಆಯೋಜಿಸಲಾಗಿತ್ತು.




ದರ್ಗಾ ಹಜ್ರತ್ ಖ್ವಾಜಾ ಬಂದೇನವಾಜ್ (ರ.ಅ) ಅವರ ಸಜ್ಜಾದಾ ನಶೀನ್ ಹಾಗೂ ಕರ್ನಾಟಕ ವಕ್ಫ್ ಮಂಡಳಿಯ ಅಧ್ಯಕ್ಷರಾದ ಹಜ್ರತ್ ಡಾ. ಹಾಫಿಜ್ ಸಯ್ಯದ್ ಮುಹಮ್ಮದ ಅಲಿ ಅಲ್–ಹುಸ್ಸೇನಿ ಸಾಹೇಬ್ ಕಿಬ್ಲಾ ಅವರು, ಹಜ್ರತ್ ಇಮಾಮ್ ಹುಸೈನ್ (ರ.ಅ) ಅವರ ಮಹಾನ್ ಶಹಾದತ್ ಸತ್ಯ, ಧರ್ಮನಿಷ್ಠೆ, ತ್ಯಾಗ ಮತ್ತು ಇಸ್ಲಾಂ ಧರ್ಮದ ಶ್ರೇಷ್ಠತೆಯ ಶಾಶ್ವತ ಸಂಕೇತವಾಗಿದೆ ಎಂದು ಹೇಳಿದರು. ಅಹ್ಲೆ ಬೈತ್‌ರ ಮೇಲಿನ ಪ್ರೀತಿ ಪ್ರತಿಯೊಬ್ಬ ಮುಸ್ಲಿಮನ ಇಮಾನದ ಅವಿಭಾಜ್ಯ ಅಂಗವಾಗಿದ್ದು, ಮೊಹರಂ ತಿಂಗಳನ್ನು ಗೌರವ, ಶ್ರದ್ಧೆ ಹಾಗೂ ಆಧ್ಯಾತ್ಮಿಕ ಭಾವನೆಯೊಂದಿಗೆ ಆಚರಿಸಬೇಕು ಎಂದು ಅವರು ತಿಳಿಸಿದರು.

ಹೈದರಾಬಾದ್‌ನ ಮೌಲಾನಾ ಸಯ್ಯದ್ ಕಲೀಮುಲ್ಲಾ ಅಮೀನಿ ಕಾಶಿಫ್ ಪಾಶಾ ಹಾಗೂ ಸುನ್ನಿ ದಾವತ್–ಎ–ಇಸ್ಲಾಮಿಯ ಮೌಲಾನಾ ಅಲ್–ಹಾಜ್ ಸಯ್ಯದ್ ಅಮೀನ್ ಖಾದ್ರಿ ಸಭೆಯನ್ನುದ್ದೇಶಿಸಿ ಮಾತನಾಡುತ್ತ ಸಯ್ಯಿದುಶ್ ಶುಹದಾ ಹಜರತ್ ಇಮಾಮ್ ಹುಸೈನ್ (ರ.ಅ) ಅವರ ಅಪೂರ್ವ ತ್ಯಾಗವನ್ನು ಸ್ಮರಿಸಿ, ಕರ್ಬಲಾದ ಶಾಶ್ವತ ಸಂದೇಶವಾದ ಸತ್ಯ, ನ್ಯಾಯ, ತಾಳ್ಮೆ, ತ್ಯಾಗ ಮತ್ತು ಧರ್ಮನಿಷ್ಠೆಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಡಾ. ಸಯ್ಯದ್ ಮುಸ್ತಫಾ ಅಲ್–ಹುಸೈನಿ, ಸಯ್ಯದ್ ಮುಹಮ್ಮದ್ ಸಯ್ಯದ್ ಹುಸೈನಿ, ಸಯ್ಯದ್ ಆಲಂ ಹುಸೈನಿ, ಸಯ್ಯದ್ ಮುರ್ತಝಾ ಅಮೀನಿ, ಸಯ್ಯದ್ ಆಕಿಬ್ ಹುಸೈನಿ, ಮೌಲಾನಾ ಸಯ್ಯದ್ ಅಬ್ದುಲ್ ರಶೀದ್, ಮೌಲಾನಾ ಮುಹಮ್ಮದ್ ತನ್ವೀರ್ ಅಹ್ಮದ್ ಅಶ್ರಫಿ (ಪ್ರಾಂಶುಪಾಲರು, ದಾರುಲ್ ಉಲೂಮ್ ರೀನಿಯಾ ಬಂದೇ ನವಾಜ್) ಹಾಗೂ ಮುಫ್ತಿ ಹಾಫಿಜ್ ಸಯ್ಯದ್ ಅಬ್ದುಲ್ ರಊಫ್ (ಸದರ್ ಮುಫ್ತಿ, ದಾರುಲ್ ಇಫ್ತಾ, ದಾರುಲ್ ಉಲೂಮ್ ರೀನಿಯಾ ಬಂದೇ ನವಾಜ್) ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಮೊಹಮ್ಮದ್ ಅಬ್ದುಲ್ ಬಾಸಿತ್ (ಕಾರ್ಯದರ್ಶಿ, ಹಜರತ್ ಖ್ವಾಜಾ ಬಂದೇ ನವಾಜ್ ದರ್ಗಾ), ಸಯ್ಯದ್ ನಿಯಾಜ್, ಅಹ್ಸನ್ ಜಾಗೀರ್‌ದಾರ್, ಬಸವಕಲ್ಯಾಣದ ಹಜರತ್ ರಾಹೆ ಬಾಗ್ ಸವಾರ್ ದರ್ಗಾದ ಸಜ್ಜಾದಾ ನಶೀನ್, ಮೌಲಾನಾ ಅಬ್ದುಲ್ ಹಕೀಮ್ ಖಾದ್ರಿ, ಮೌಲಾನಾ ಫಝುಲ್ ಅಹ್ಮದ್ ಸುಹ್ರವರ್ದಿ, ಮೌಲಾನಾ ಜಮೀಲ್ ಅಹ್ಮದ್ ಸಿದ್ದೀಖಿ, ಮೌಲಾನಾ ಹಾಫಿಜ್ ಗುಲಾಮ್ ಮುಹಮ್ಮದ್ ಶರಫಿ, ಸಯ್ಯದ್ ತಯ್ಯಬ್ ಅಲಿ ಯಾಕೂಬಿ, ಮೊಹಮ್ಮದ್ ಇಸ್ಮಾಯಿಲ್ ಕಾರಿಗರ್ ಸೇರಿದಂತೆ ಹಲವಾರು ಉಲಮಾಗಳು, ಧಾರ್ಮಿಕ ಮುಖಂಡರು ಹಾಗೂ ಗಣ್ಯರು ಉಪಸ್ಥಿತರಿದ್ದರು.

# ಮನೆ ಮನೆಗೆ ಭೇಟಿ ನೀಡಿ ಎನುಮರೇಶನ್ ಫಾರ್ಮ್ ವಿತರಿಸಿದ ಡಿಸಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಅಭಿಯಾನದ ಅಂಗವಾಗಿ ಜಿಲ್ಲಾಧಿಕಾರಿ ಸಂಗಪ್ಪ ನವನಗರದಲ್ಲಿ ಮನೆ ಮನೆಗೆ ಭೇಟಿ ನೀಡಿ ಎನ್ಯೂಮರೇಷನ್ ಫಾರಂಗಳನ್ನು ಮಂಗಳವಾರ ವಿತರಣೆ ಮಾಡಿದರು.

ನವನಗರದ ಸೆಕ್ಟರ ನಂ.33 ರಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ವೆಂಕಣ್ಣ ಸುಗತೇಕರ ಮನೆ ಸೇರಿದಂತೆ ಇತರೆ ಮನೆಗಳಿಗೆ ಭೇಟಿ ನೀಡಿ ಎನ್ಯೂಮರೇಷನ್ ಫಾರಂಗಳನ್ನು ವಿತರಣೆ ಮಾಡಿದರು. ಈ ವೇಳೆ ಮತದಾರರಿಗೆ ಫಾರಂ ಭರ್ತಿ ಮಾಡುವ ವಿಧಾನ, ಅಗತ್ಯ ದಾಖಲೆಗಳ ಕುರಿತು ಮಾಹಿತಿ ನೀಡಿದರು.



ನಿಗದಿತ ಅವಧಿಯೊಳಗೆ ನಮೂನೆಗಳನ್ನು ಭರ್ತಿ ಮಾಡಿ ಸಲ್ಲಿಸುವಂತೆ ಮನವಿ ಮಾಡಿಕೊಂಡರು.

ಎಸ್.ಐ.ಆರ್ ಅಭಿಯಾನದಲ್ಲಿ ಸಾರ್ವಜನಿಕರು ಸಹಕರಿಸಿ, ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ಪರಿಶಿಲಿಸಿ ಅಗತ್ಯವಿದ್ದಲ್ಲಿ ತಿದ್ದುಪಡಿ, ಸೇರ್ಪಡೆ ಅಥವಾ ಬದಲಾವಣೆಗಾಗಿ ಸಂಬಂಧಿಸಿದ ಫಾರಂಗಳನ್ನು ಭರ್ತಿ ಮಾಡಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ತಿಳಿಸಿದರು.

ಮನೆ ಮನೆ ಭೇಟಿ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಎನ್ಯೂಮರೇಷನ್ ಕಾರ್ಯವೈಖರಿಯನ್ನು ಪರಿಶೀಲಿಸಿ, ಪ್ರತಿ ಅರ್ಹ ಮತದಾರರಿಗೂ ನಮೂನೆ ತಲುಪುವಂತೆ ಹಾಗೂ ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವಂತೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಭೇಟಿ ಸಂದರ್ಭದಲ್ಲಿ ತಹಶೀಲ್ದಾರ ವಾಸುದೇವ ಸ್ವಾಮಿ, ಚುನಾವಣಾ ಶಿರಸ್ತೇದಾರ ನಾಗರಾಜ ಕುಲಕರ್ಣಿ, ಬೂತ ಮಟ್ಟದ ಅಧಿಕಾರಿ ಸರಸ್ವತಿ ಬಿ.ಎಸ್, ಮೇಲ್ವಿಚಾರಕಿ ಸುರೇಖಾ ರಾಟಿ ಸೇರಿದಂತೆ ಇತರರು ಇದ್ದರು.

# ಶಾಸಕರ ಹೆಸರು ಕೆಡಿಸಲು ನಡೆಸಿದ ಪ್ರಯತ್ನ ಖಂಡನೀಯ



• ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ

ಸುಸೂತ್ರವಾಗಿ ನಡೆಯುತ್ತಿದ್ದ ಸರ್ಕಾರಿ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಉದ್ದೇಶಪೂರ್ವಕವಾಗಿ ಕೆಲ ಕಿಡಿಗೇಡಿಗಳು ಪ್ರವೇಶಿಸಿ ಗದ್ದಲ ಉಂಟು ಮಾಡಿದ್ದು, ಶಾಸಕ ಪ್ರದೀಪ್ ಈಶ್ವರ್ ಅವರ ಹೆಸರನ್ನು ಕೆಡಿಸಲು ನಡೆಸಿದ ಪ್ರಯತ್ನ ಖಂಡನೀಯ ಎಂದು ಕಾಂಗ್ರೆಸ್ ಅಹಿಂದ ಮುಖಂಡರು ಆರೋಪಿಸಿದ್ದಾರೆ.

ಮಂಗಳವಾರ ನಗರದ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹಿರಿಯ ಕಾಂಗ್ರೆಸ್ ಮುಖಂಡ ಸುಧಾ ವೆಂಕಟೇಶ್, ಪ್ರೋಟೋಕಾಲ್ ಪ್ರಕಾರವೇ ಶಾಸಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಆದರೆ ಅದನ್ನು ಸಹಿಸಲಾಗದೆ ಕೆಲವರು ಉದ್ದೇಶಪೂರ್ವಕವಾಗಿ ಗೊಂದಲ ಸೃಷ್ಟಿಸಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮವು ಶಿಸ್ತಿನಿಂದ ನಡೆಯುತ್ತಿದ್ದ ಸಂದರ್ಭದಲ್ಲಿ ಕೆಲವರು ಬಂದು ಶಾಸಕರ ವಿರುದ್ಧ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿ ಕಾರ್ಯಕ್ರಮದ ಶಿಸ್ತು ಹಾಳು ಮಾಡಿದ್ದಾರೆ. ಇದು ಕೇವಲ ಶಾಸಕರಿಗೆ ನೋವುಂಟು ಮಾಡುವ ಕೆಲಸವಲ್ಲದೆ, ನಾಡಪ್ರಭು ಕೆಂಪೇಗೌಡರಿಗೂ ಅವಮಾನ ಮಾಡಿದಂತಾಗಿದೆ ಕಾರ್ಯಕ್ರಮದ ವೇಳೆ ಶಾಸಕರ ವಿರುದ್ಧ ಎಷ್ಟೇ ಪ್ರಚೋದನೆ ನಡೆದಿದ್ದರೂ ಅವರು ಶಾಂತ ಹಾಗೂ ಶಿಸ್ತಿನಿಂದ ಕಾರ್ಯಕ್ರಮವನ್ನು ಮುನ್ನಡೆಸಿದರು. ಆದರೆ ಕಾರ್ಯಕ್ರಮದ ನಂತರ ನೂರಕ್ಕೂ ಹೆಚ್ಚು ಮಂದಿ ಸೇರಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಪ್ರಚೋದನೆ ನೀಡಿದ್ದು, ಬಳಿಕ ಅವರತ್ತ ಚಪ್ಪಲಿ ಎಸೆಯಲಾಗಿದೆ ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿ ಪೊಲೀಸರು ಸುಮೋಟೋ ಪ್ರಕರಣ ದಾಖಲಿಸಿ ಬಂಧನ ಕ್ರಮ ಕೈಗೊಂಡಿದ್ದು, ಇದು ಯಾರಾದರೂ ದೂರು ನೀಡಿದ ನಂತರ ನಡೆದ ಕ್ರಮವಲ್ಲ ಎಂದು ಸ್ಪಷ್ಟಪಡಿಸಿದರು.

ಇನ್ನೂ ಶಾಸಕರ, ಅವರ ಪ್ರಚೋದನೆಯಿಂದಲೇ ಗದ್ದಲ ನಡೆದಿದೆ ಎಂದು ಆರೋಪಿಸಿ ಕೆಲವರು ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿರುವುದು ಎಷ್ಟರ ಮಟ್ಟಿಗೆ ನ್ಯಾಯಸಮ್ಮತ ಎಂದು ಪ್ರಶ್ನಿಸಿದರು.

ಗವಿರಾಯಪ್ಪ, ಮಾತನಾಡಿ ಕೆಂಪೇಗೌಡ ಜಯಂತಿ ವೇಳೆ ನಡೆದ ಘಟನೆಯಲ್ಲಿ ಕೆಲ ಕಿಡಿಗೇಡಿಗಳ ವರ್ತನೆಯೇ ಪ್ರಮುಖ ಕಾರಣವಾಗಿದೆ ಕಾರ್ಯಕ್ರಮದಲ್ಲಿ ಗದ್ದಲ ಉಂಟು ಮಾಡಿದ್ದಲ್ಲದೆ, ನಂತರವೂ ಶಾಸಕರ ವಾಹನ ಸ್ಥಳದಿಂದ ತೆರಳುವವರೆಗೂ ಅವರ ವಿರುದ್ಧ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಲಾಗಿದೆ. ಬಳಿಕ ಶಾಸಕರ ಕಾರಿನತ್ತ ಚಪ್ಪಲಿ ಎಸೆದು ಜನಪ್ರತಿನಿಧಿಗೆ ಅಗೌರವ ತೋರಲಾಗಿದೆ ಎಂದು ಹೇಳಿದರು. ಈ ಎಲ್ಲಾ ಘಟನೆಗಳ ಹಿನ್ನೆಲೆಯಲ್ಲಿ ಪೊಲೀಸರು ಸುಮೋಟೋ ಪ್ರಕರಣ ದಾಖಲಿಸಿ ತಪ್ಪಿತಸ್ಥರನ್ನು ವಶಕ್ಕೆ ಪಡೆದಿದ್ದಾರೆ. ಅಂತಹ ಸಂದರ್ಭದಲ್ಲಿ ಇದರಲ್ಲಿ ಶಾಸಕರ ಪಾತ್ರ ಎಲ್ಲಿಂದ ಬರುತ್ತದೆ ಎಂದು ಪ್ರಶ್ನಿಸಿದರು.

ಘಟನೆಗೆ ಶಾಸಕರ ಪ್ರಚೋದನೆಯೇ ಕಾರಣ ಎಂದು ಆರೋಪಿಸಿ ನಿನ್ನೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಸಲ್ಲಿಸಿರುವುದು ಸರಿಯಲ್ಲ ಆದರೆ ಶಾಸಕರ ವಿರುದ್ಧ ನಿರಾಧಾರ ಆರೋಪಗಳನ್ನು ಮಾಡಿ ಅವರ ಗೌರವಕ್ಕೆ ಧಕ್ಕೆ ತರುವ ರೀತಿಯ ಅಪಪ್ರಚಾರವನ್ನು ಇಲ್ಲಿಗೆ ನಿಲ್ಲಿಸಬೇಕು ಎಂದು ಆಗ್ರಹಿಸಿದರು. ಇದೇ ವೇಳೆ ಮಾತನಾಡಿದ ಡಾನ್ಸ್ ಶ್ರೀನಿವಾಸ್, ಉದ್ದೇಶಪೂರ್ವಕವಾಗಿ ಗದ್ದಲ ಸೃಷ್ಟಿಸಿ ಶಾಸಕರ ಹೆಸರನ್ನು ಕೆಡಿಸುವ ಪ್ರಯತ್ನ ನಡೆದಿದೆ ಕೆಲವರು ಹಣ ಖರ್ಚು ಮಾಡಿ ಹೊರಗಡೆಯವರನ್ನು ಕರೆಸಿ ಕಾರ್ಯಕ್ರಮದಲ್ಲಿ ಗೊಂದಲ ಉಂಟು ಮಾಡಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ನಾಯನಹಳ್ಳಿ ನಾರಾಯಣಸ್ವಾಮಿ, ನಾರಾಯಣಮ್ಮ,ರಾಮಚಂದ್ರ,ಮಂಡಿಕಲ್ ಮಂಚೇನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾಗಭೂಷಣ್,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಕ್ಷಿತ್ ನಗರಸಭೆ ಮಾಜಿ ಸದಸ್ಯ ಶ್ರೀನಿವಾಸ್,ಮಹಮದ್ ಜಾಫರ್,ಟಿಎಪಿಸಿಎಂಎಸ್ ನಿರ್ದೇಶಕ ಬಿಸೇಗಾರಹಳ್ಳಿ ನಾಗೇಶ್,ತಿಪ್ಪೇನಹಳ್ಳಿ ನಾರಾಯಣ,ಬಿ.ವಿ ಆನಂದ್ ಇತರರು ಉಪಸ್ಥಿತರಿದ್ದರು.

# ವಿದ್ಯುತ್ ಕಂಪನಿಗಳಿಗೆ ಮಾರ್ಗಸೂಚಿಗಳನ್ನು ನೀಡಿದ ರಾಜ್ಯ ಸರ್ಕಾರ

**ಬೀದರ್:** ರಾಜ್ಯದ 7 ವಿದ್ಯುತ್ ಸರಬರಾಜು ಕಂಪನಿಗಳಾದ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು, ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು, ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ, ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ, ಮೈಸೂರು, ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರಗಿ, ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು, ವ್ಯವಸ್ಥಾಪಕ ನಿರ್ದೇಶಕರು, ಹುಕ್ಕೇರಿ ಗ್ರಾಮೀಣಾ ವಿದ್ಯುತ್ ಸರಬರಾಜು ಕಂಪನಿ, ಹುಕ್ಕೇರಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ವಿದ್ಯುತ್ ಸಂಪರ್ಕ ನೀಡಲು ಅನುಸರಿಸಬೇಕಾದ ಸಾಮಾನ್ಯ ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು ಎಂದು ದಿನಾಂಕ:22-06-2026 ರ ಆದೇಶದಲ್ಲಿ ತಿಳಿಸಲಾಗಿತ್ತು.

ಅದರಂತೆ ವಿದ್ಯುತ್ ಸಂಪರ್ಕ ನೀಡಲು ಅನುಸರಿಸಬೇಕಾದ ಸಾಮಾನ್ಯ ಮಾರ್ಗಸೂಚಿಗಳನ್ನು ಸರ್ಕಾರ ದಿನಾಂಕ: 22-06-2026 ರ ಪತ್ರದಲ್ಲಿ ಹೊರಡಿಸಿದೆ.

ಈ ಕುರಿತು ಇಂಧನ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಶಾಂತಾರಾಮ ಅವರು ರಾಜ್ಯದ 7 ವಿದ್ಯುತ್ ಸರಬರಾಜು ಕಂಪನಿಗಳಿಗೆ ಪತ್ರ ಬರೆದು ಕಾರ್ಯ ವಿಧಾನಗಳನ್ನು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಕಡ್ಡಾಯವಾಗಿ ಪಾಲಿಸಬೇಕೆಂದು ತಿಳಿಸಿದ್ದಾರೆ.

# ನವಿತಾ ರವಿಕುಮಾರ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ



**ಪೀಣ್ಯ, ದಾಸರಹಳ್ಳಿ:** ಏಷ್ಯಾ ಇಂಟರ್ನ್ಯಾಷನಲ್ ಕಲ್ಚರಲ್ ರಿಸರ್ಚ್ ವಿಶ್ವವಿದ್ಯಾಲಯ ವತಿಯಿಂದ ಹೊಸೂರಿನಲ್ಲಿ ನಡೆದ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ಸಮಾರಂಭದಲ್ಲಿ ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಸಿಡೆದಳ್ಳಿ ಗ್ರಾಮದಲ್ಲಿ ವಾಸವಾಗಿರುವನಿವಾಸಿ ಸಮಾಜ ಸೇವಕಿ ನವಿತಾ ರವಿಕುಮಾರ್ ಅವರಿಗೆ ಸಮಾಜ ಸೇವಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಡಾ.ಕೆ.ಎ. ಮನೋಕರನ್ ಮಾಜಿ ಶಾಸಕರು ತಮಿಳುನಾಡು, ಪ್ರಣವ ಸ್ವರೂಪ ಮುನಿ ನಿರಂಜನಪೂಜ್ಯ ಶ್ರೀ ಶ್ರೀ ಡಾ. ಕೃಷ್ಣಮೂರ್ತಿ ಮಹಾಸ್ವಾಮಿಗಳು, ಶ್ರೀ ಕ್ಷೇತ್ರ ಧರ್ಮ ಧ್ವಜ ಪ್ರತಿಷ್ಠಾನ, ಏಷ್ಯಾ ಅಂತರರಾಷ್ಟ್ರೀಯ ಸಂಸ್ಕೃತಿ ಅಕಾಡೆಮಿ - ಅಮೇರಿಕನ್ ವಿಸ್ಡಮ್ ಪೀಸ್ ವಿಶ್ವವಿದ್ಯಾಲಯ, ಡಾ. ಕರಾಟೆ ಎ ಪಿ ಶ್ರೀನಾಥ್, ಎಪಿಎಂಸಿ ನಿರ್ದೇಶಕ ಹೊಳೆನರಸೀಪುರ, ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ನಿರ್ದೇಶಕರು ಎಸ್ ಟಿ. ಸೋಂಬೇ ಗೌಡ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ರಾಜ್ಯ ಪ್ರಶಸ್ತಿ ಪುರಸ್ಕೃತರು ಡಾ.ಸಂಗನಬಸಪ್ಪ ಬಿರಾದರ್, ಡಿಎಂಸಿಎಸ್ ನಿರ್ದೇಶಕರು ಕರ್ನಾಟಕ ಉಚ್ಚ ನ್ಯಾಯಾಲಯದ ಈಶ್ವರಚಂದ್ರ ಬಸಪ್ಪ ಇಂಗಳಗಿ ಮುಂತಾದವರು ಉಪಸ್ಥಿತರಿದ್ದರು.

# ಸರ್ಕಾರಿ ಜಾಗಗಳ ಒತ್ತುವರಿ ತೆರವುಗೊಳಿಸುವಂತೆ ಒತ್ತಾಯ



**ಗಂಗಾವತಿ:** ನಗರದ ರಸ್ತೆಗಳು ಸಂಪೂರ್ಣ ಹದಗೆಟ್ಟಿದೆ, ತಗ್ಗು-ಗುಂಡಿಗಳಿಂದ ಕೂಡಿವೆ ರಿಪೇರಿ ಮಾಡಬೇಕೆಂದು ಸರ್ವಾಔ ಗೀ ಣ ಅಭಿವೃದ್ಧಿ ಹೋರಾಟ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಮ್ಯಾಗಳಮನಿ ಒತ್ತಾಯಿಸಿದರು. ನಗರದ ನೀಲಕಂಠಶ್ವರ ಸರ್ಕಲ್ ನಲ್ಲಿ ನಗರ ಸಭೆಯ ಆರೋಗ್ಯ ನೀರಿಕ್ಷಕ ನಾಗರಾಜ್ ಇವರಿಗೆ. ತಾಲೂಕ ಘಟಕವು ಮನವಿ ಸಲ್ಲಿದ ನಂತರ ಮಾತನಾಡಿ ನಗರದಾದ್ಯಂತ ರಸ್ತೆಗಳಲ್ಲಿ ತಗ್ಗು-ಗುಂಡಿಗಳು ಬಿದ್ದಿದ್ದು, ನಿತ್ಯ ಅಪಘಾತಗಳು ಸಂಭವಿಸುತ್ತಿವೆ. ಕೂಡಲೇ ರಸ್ತೆಗಳನ್ನು ರಿಪೇರಿ ಮಾಡಬೇಕು.

**ಸರ್ಕಾರಿ ಜಾಗಗಳ ಸಂರಕ್ಷಣೆ:** ನಗರಸಭೆ ವ್ಯಾಪ್ತಿಯ ಸಿ.ಎ. ಸೈಟ್ ಸೇರಿದಂತೆ ಸರ್ಕಾರಿ ಜಾಗಗಳನ್ನು ಗುರುತಿಸಿ, ಬೇಲಿ ಹಾಕಿ ನಾಮಫಲಕ ಅಳವಡಿಸಬೇಕು.

**ಒತ್ತುವರಿ ತೆರವು:** ಪ್ರಭಾವಿಗಳು ಅತಿಕ್ರಮಿಸಿಕೊಂಡಿರುವ ಸರ್ಕಾರಿ ಜಾಗ ಹಾಗೂ ಉದ್ಯಾನವನಗಳನ್ನು ತೆರವುಗೊಳಿಸಿ ವಶಕ್ಕೆ ಪಡೆಯಬೇಕು.

**ಸರ್ಕಾರಿ ಕಚೇರಿಗಳಿಗೆ ಸ್ಥಳಾವಕಾಶ:** ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಸರ್ಕಾರಿ ಕಚೇರಿಗಳು, ಹಾಸ್ಟೆಲ್ ಹಾಗೂ ಅಂಗನವಾಡಿ ಕೇಂದ್ರಗಳಿಗೆ ಸರ್ಕಾರಿ ಜಾಗದಲ್ಲಿ ವ್ಯವಸ್ಥೆ ಕಲ್ಪಿಸಬೇಕು.

**ಫುಟ್‌ಪಾತ್ ತೆರವು:** ನಿಯಮ ಮೀರಿ ಫುಟ್‌ಪಾತ್ ಅತಿಕ್ರಮಿಸಿ ನಿರ್ಮಿಸಿರುವ ಕಟ್ಟಡಗಳನ್ನು ಪತ್ತೆ ಮಾಡಿ, ಅಳತೆ ಮಾಡುವ ಮೂಲಕ ತೆರವುಗೊಳಿಸಬೇಕು.

**ಯುಜಿಡಿ ಸಮಸ್ಯೆ:** ಯುಜಿಡಿ ನೀರು ರಸ್ತೆಯ ಮೇಲೆ ಹರಿಯುತ್ತಿದ್ದು, ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ. ಕೂಡಲೇ ಸಮಸ್ಯೆ ಬಗೆಹರಿಸಬೇಕು.

**ಮೂತ್ರಾಲಯ ನಿರ್ಮಾಣ:** ಸಾರ್ವಜನಿಕ ಸ್ಥಳಗಳಾದ ಗಾಂಧಿ ಸರ್ಕಲ್, ಮಹಾವೀರ ಸರ್ಕಲ್ ಸೇರಿದಂತೆ ಜನನಿಬಿಡ ಪ್ರದೇಶಗಳಲ್ಲಿ ತುರ್ತಾಗಿ ಮೂತ್ರಾಲಯಗಳನ್ನು ನಿರ್ಮಿಸಬೇಕು.

ನಗರಸಭೆ ಈ ಬೇಡಿಕೆಗಳನ್ನು ತಕ್ಷಣವೇ ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಸ್ವರೂಪದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಮ್ಯಾಗಳಮನಿ ಎಚ್ಚರಿಸಿದ್ದಾರೆ.ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಚಂದ್ರು ನಿಸರ್ಗ ತಾಲೂಕ ಅಧ್ಯಕ್ಷ ಜಡಿಯಪ್ಪ ಹಂಚಿನಾಳ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಕಡೆಬಾಗಿಲು, ರಾಮಣ್ಣ ರುದ್ರಾಕ್ಷಿ, ಕೆ ಎಂ ಅರವಿಂದ್ ಯೋಗಿ, ಮಂಜುನಾಥ ಚನ್ನಾದಾಸರ, ಬೋಗೇಶ್ ಆನೆಗುಂದಿ, ಮೇಘರಾಜ್, ರಗಡಪ್ಪ ಹೊಸಳ್ಳಿ, ಬಿ ಕೆ ಗಣೇಶ್, ಮಂಜುನಾಥ ಹಿರೇಮಠ್, ರೆಹಮಾನ್, ಹರೀಶ್, ಮಹೇಬುಬ್ ಹನುಮೇಶ್ ಸೋಮಶೇಖರ್, ಮತ್ತಿತರರು ಇದ್ದರು.

# ಪತ್ರಿಕೆ ಕೇವಲ ಸುದ್ದಿಯನ್ನು ತಿಳಿಸುವ ಮಾಧ್ಯಮವಲ್ಲ



ವರ್ತಮಾನ
● ಭಾಗ್ಯಶ್ರೀ ಜೋಶಿ
ಪತ್ರಕರ್ತರು, ಹುಬ್ಬಳ್ಳಿ

"ಪತ್ರಿಕೆ ಕೇವಲ ಸುದ್ದಿಯನ್ನು ತಿಳಿಸುವ ಮಾಧ್ಯಮವಲ್ಲ; ಅದು ಸಮಾಜದ ಮನಸ್ಸು, ಪ್ರಜಾಪ್ರಭುತ್ವದ ಕಾವಲುಗಾರ ಹಾಗೂ ಜನರ ಧ್ವನಿಯಾಗಿದೆ."

ಜುಲೈ 1ನ್ನು ಪತ್ರಿಕಾ ದಿನಾಚರಣೆಯಾಗಿ ಆಚರಿಸುವುದು ಪತ್ರಿಕೋದ್ಯಮದ ಮಹತ್ವವನ್ನು ಸ್ಮರಿಸುವುದಷ್ಟೇ ಅಲ್ಲ, ಸಮಾಜದ ಅಭಿವೃದ್ಧಿಯಲ್ಲಿ ಪತ್ರಿಕೆಗಳ ಪಾತ್ರವನ್ನು ಗೌರವಿಸುವ ದಿನವೂ ಹೌದು. ಸಮಾಜದಲ್ಲಿ ನಡೆಯುವ ಬೆಳವಣಿಗೆಗಳನ್ನು ಜನರಿಗೆ ತಲುಪಿಸುವುದು, ಅಧಿಕಾರದಲ್ಲಿರುವವರನ್ನು ಜವಾಬ್ದಾರಿಯುತವಾಗಿ ಕೆಲಸ ಮಾಡುವಂತೆ ಎಚ್ಚರಿಸುವುದು ಹಾಗೂ ಜನರ ಸಮಸ್ಯೆಗಳಿಗೆ ಧ್ವನಿಯಾಗುವುದು ಪತ್ರಿಕೆಯ ಪ್ರಮುಖ ಕರ್ತವ್ಯವಾಗಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಜೊತೆಗೆ ಪತ್ರಿಕಾರಂಗವನ್ನು "ನಾಲ್ಕನೇ ಸ್ತಂಭ" ಎಂದು ಕರೆಯಲಾಗುತ್ತದೆ. ಏಕೆಂದರೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡುವಲ್ಲಿ, ಭ್ರಷ್ಟಾಚಾರ ಮತ್ತು ಅನ್ಯಾಯವನ್ನು ಬೆಳಕಿಗೆ ತರುವಲ್ಲಿ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಪತ್ರಿಕೆಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ.

ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಪತ್ರಿಕೋದ್ಯಮವೂ ಹೊಸ ರೂಪ ಪಡೆದುಕೊಂಡಿದೆ. ಮುದ್ರಣ ಮಾಧ್ಯಮದ ಜೊತೆಗೆ ಡಿಜಿಟಲ್ ಪತ್ರಿಕೋದ್ಯಮ, ವೆಬ್ ಪೋರ್ಟಲ್‌ಗಳು ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಕ್ಷಣಾರ್ಧದಲ್ಲೇ ಸುದ್ದಿ ಜನರಿಗೆ ತಲುಪುತ್ತಿದೆ. ಆದರೆ ವೇಗದ ಜೊತೆಗೆ ಸುದ್ದಿಯ ಸತ್ಯಾಸತ್ಯತೆ, ನಿಖರತೆ ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡುವುದು ಇಂದಿನ ಪತ್ರಕರ್ತರ ದೊಡ್ಡ ಹೊಣೆಗಾರಿಕೆಯಾಗಿದೆ.

ಪತ್ರಕರ್ತರು ಅನೇಕ ಸವಾಲುಗಳ ನಡುವೆಯೂ ಜನರ ಹಿತಾಸಕ್ತಿಗಾಗಿ ಕಾರ್ಯನಿರ್ವಹಿಸುತ್ತಾರೆ.




ಪ್ರಕೃತಿ ವಿಕೋಪ, ಚುನಾವಣೆ, ಅಪಘಾತ, ಸಾಂಕ್ರಾಮಿಕ ರೋಗಗಳು ಅಥವಾ ಇತರ ಸಂಕಷ್ಟದ ಸಂದರ್ಭಗಳಲ್ಲಿಯೂ ಅವರು ಜನರಿಗೆ ನಿಖರ ಮಾಹಿತಿ ತಲುಪಿಸಲು ಶ್ರಮಿಸುತ್ತಾರೆ. ಈ ಸೇವೆ ಸಮಾಜಕ್ಕೆ ಅಮೂಲ್ಯವಾಗಿದೆ.

ಇಂದಿನ ಯುಗದಲ್ಲಿ ಸುಳ್ಳು ಸುದ್ದಿಗಳು ಮತ್ತು ವದಂತಿಗಳು ಕ್ಷಣಾರ್ಧದಲ್ಲಿ ಹರಡುವ ಅಪಾಯವಿದೆ. ಇಂತಹ ಸಂದರ್ಭದಲ್ಲಿ ಜವಾಬ್ದಾರಿಯುತ ಪತ್ರಿಕೋದ್ಯಮವೇ ಸಮಾಜದಲ್ಲಿ ಸತ್ಯ, ವಿಶ್ವಾಸ ಮತ್ತು ಪ್ರಜ್ಞೆಯನ್ನು ಉಳಿಸಬಲ್ಲದು. ಆದ್ದರಿಂದ ಪತ್ರಕರ್ತರು ನೈತಿಕತೆ, ನಿಷ್ಪಕ್ಷಪಾತತೆ ಹಾಗೂ ಜನಪರತೆಯನ್ನು ತಮ್ಮ ವೃತ್ತಿಯ ಮೂಲ ತತ್ವಗಳಾಗಿ ಉಳಿಸಿಕೊಳ್ಳಬೇಕು.

ಪತ್ರಿಕಾ ದಿನಾಚರಣೆ ನಮಗೆ ಒಂದು ಸಂದೇಶ ನೀಡುತ್ತದೆ. ಸ್ವತಂತ್ರ, ಜವಾಬ್ದಾರಿಯುತ ಮತ್ತು ಮೌಲ್ಯಾಧಾರಿತ ಪತ್ರಿಕೋದ್ಯಮವೇ ಪ್ರಜಾಪ್ರಭುತ್ವದ ಶಕ್ತಿ. ಪತ್ರಕರ್ತರ ಸೇವೆಯನ್ನು ಗೌರವಿಸುವುದರ ಜೊತೆಗೆ ಸತ್ಯವನ್ನು ಬೆಂಬಲಿಸುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕನದ್ದಾಗಿದೆ.

"ಸತ್ಯದ ಹುಡುಕಾಟವೇ ಪತ್ರಿಕೋದ್ಯಮದ ಆತ್ಮ; ಜನಸೇವೆಯೇ ಅದರ ಪರಮ ಧ್ಯೇಯ."

ಜುಲೈ 1ರ ಪತ್ರಿಕಾ ದಿನಾಚರಣೆಯ ಸಂದರ್ಭದಲ್ಲಿ ಸಮಾಜಮುಖಿ, ನೈತಿಕ ಹಾಗೂ ನಿರ್ಭೀತ ಪತ್ರಿಕೋದ್ಯಮಕ್ಕೆ ನಮ್ಮೆಲ್ಲರ ಬೆಂಬಲ ಮತ್ತು ಗೌರವ ಸಲ್ಲಿಸೋಣ.


# ಕಾರ್ಮಿಕರಿಗೆ ವೈದ್ಯಕೀಯ ಭದ್ರತೆ ಮರೀಚಿಕೆ

• ಮಲ್ಲಮ್ಮ ನುಡಿ ವಾರ್ತೆ ಕಾರವಾರ/ದಾಂಡೇಲಿ

ಕರ್ನಾಟಕದ ಅತಿದೊಡ್ಡ ಜಿಲ್ಲೆಯಾದ ಉತ್ತರ ಕನ್ನಡ ಜಿಲ್ಲೆಯ ಇಎಸಐ ಕಾರ್ಮಿಕರು ಮತ್ತು ಅವರ ಕುಟುಂಬಗಳು ಮೂಲಭೂತ ವೈದ್ಯಕೀಯ ಸೌಲಭ್ಯ ಗಳಿಂದ ವಂಚಿತರಾ ಗಿದ್ದು,ಕಾರ್ಮಿಕರ ಸಾಮಾಜಿಕ ಭದ್ರ ತೆಗೆ ರೂಪು ಗೊಂ ಡಿರುವ ನೌಕರರ ರಾಜ್ಯ ವಿಮಾ ಕಾಯ್ದೆ ,1948 (Employees' StateIn suranceAct,1948)ಯ ಉದ್ದೇಶವೇ ಪ್ರಶ್ನಾರ್ಥಕ ವಾಗಿದೆ. 2013ರ ನವೆಂಬರ್ 1ರಿಂದ ಉತ್ತರ ಕನ್ನಡ ಜಿಲ್ಲೆಯನ್ನು ಇಎಸ್‌ಐ ಯೋಜನೆ ವ್ಯಾಪ್ತಿಗೆ ತರಲಾಗಿದ್ದರೂ, 12 ತಾಲೂಕುಗಳು ಹಾಗೂ 10.25 ಲಕ್ಷ ಹೆಕ್ಟೇರ್ ವ್ಯಾಪ್ತಿಯ ಈ ವಿಶಾಲ ಜಿಲ್ಲೆಗೆ ಕೇವಲ ದಾಂಡೇಲಿಯ ಒಂದು ಇಎಸಐ ಆಸ್ಪತ್ರೆ, ಶಿರಸಿ ಮತ್ತು ಕಾರವಾರದ ಎರಡು ಔಷಧಾ ಲಯಗಳು ಹಾಗೂ ಕುಮಟಾದ ಒಂದು ಕ್ಲಿನಿಕ್ ಮಾತ್ರ ಲಭ್ಯವಿದೆ. 14 ಲಕ್ಷ ಜನಸಂಖ್ಯೆ ಮತ್ತು 2 ಲಕ್ಷಕ್ಕೂ ಅಧಿಕ ಕಾರ್ಮಿಕ ವರ್ಗವಿ ರುವ ಜಿಲ್ಲೆಯಲ್ಲಿ ಕೋಟ್ಯಂತರ ರೂ ಪಾಯಿ ಇಎಸ್‌ಐ ವಂತಿಗೆ ಸಂಗ್ರಹ ವಾಗುತ್ತಿದ್ದರೂ, ವೈದ್ಯಕೀಯ ಸೌಲಭ್ಯ ಗಳು ಮಾತ್ರ ಮರೀಚಿಕೆಯಾಗಿವೆ ಎಂಬ ಆರೋಪ ಕೇಳಿ ಬಂದಿದೆ.

ಇಎಸ್‌ಐ ಕಾಯ್ದೆ ಕಾರ್ಮಿಕರಿಗೆ ವೈ ದ್ಯಕೀಯ ಹಕ್ಕು ನೀಡುತ್ತದೆ.ನೌಕರರ ರಾಜ್ಯ ವಿಮಾ ಕಾಯ್ದೆ,1948 ರ ಪ್ರಕಾರ: ವಿಧಿ 46 ವಿಮಾದಾರರಿಗೆ ವೈದ್ಯಕೀಯ ಸೌಲ ಭ್ಯಗಳ ಹಕ್ಕು. ವಿಧಿ 56 ವೈದ್ಯಕೀಯ ಚಿಕಿತ್ಸೆ ಮತ್ತು ಆರೈ ಕೆಗೆ ಹಕ್ಕು. ವಿಧಿ 57 ಆಸ್ಪತ್ರೆ ಮತ್ತು ಔ ಷಧಾಲಯಗಳ ನಿ ರ್ವಹಣೆ.ವಿಧಿ 59 ರಾಜ್ಯ ಸರ್ಕಾರ ಮತ್ತು ಇಎಸ್‌ಐಸಿ ಮೂಲಕ ವೈದ್ಯ ಕೀಯ ಸೇವೆಗಳ ಒದಗಿಕೆ.

ಕಾನೂನು ತಜ್ಞರ ಪ್ರಕಾರ ವಂತಿಗೆ ಸಂಗ್ರಹಿಸಿ ವೈದ್ಯಕೀಯ ಸೌಲಭ್ಯ ಒದಗಿಸದಿರುವುದು ಕಾಯ್ದೆಯ ಮೂಲ ಉದ್ದೇಶಕ್ಕೆ ವಿರುದ್ಧವಾಗಿದೆ.




**50 ಹಾಸಿಗೆ ಆಸ್ಪ ತ್ರೆಗೆ ಒಬ್ಬ ವೈದ್ಯ ಮಾತ್ರ!**

1969ರ ಮೇ 5ರಂದು ಸ್ಥಾಪಿತವಾದ ದಾಂಡೇಲಿ ಇಎಸ್‌ಐ ಆಸ್ಪತ್ರೆಯಲ್ಲಿ 16 ವೈದ್ಯರ ಹುದ್ದೆಗಳು ಮಂಜೂರಾಗಿದ್ದರೂ, ಕಳೆದ ಎರಡು ದಶಕಗಳಿಂದ ಕೇವಲ ಒಬ್ಬ ಅನೆಸ್ಥೆಷಿಯಾ ತಜ್ಞ ವೈದ್ಯ ಮಾತ್ರ ಸೇವೆ ಸಲ್ಲಿಸುತ್ತಿದ್ದಾರೆ ಎನ್ನಲಾಗಿದೆ.

ಆಯುಷ್ ಕ್ಯಾಶುಯಾಲಿಟಿ ಆದರೆ ಈ ವಿಭಾಗಗಳಲ್ಲಿ ಒಂದೂ ಸಮರ್ಪ ಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ಆರೋಪ ಕಾರ್ಮಿಕರಿಂದ ಕೇಳಿ ಬಂದಿದೆ. ಕೋಟ್ಯಂತರ ಮೌಲ್ಯದ ಉಪಕರಣಗಳು ಬಳಕೆಯಾಗದೇ ಹಾಳಾಗುತ್ತಿವೆ ಆಸ್ಪತ್ರೆಯ ಲ್ಲಿರುವ ಹಲವು ಯಂತ್ರೋಪಕರ ಣಗಳು ಬಳಕೆಯಾಗದೆ ನಿಷ್ಕ್ರಿಯವಾಗಿವೆ.

# ದಿ ಮಾಣಿಕ್ ಪಬ್ಲಿಕ್ ಸ್ಕೂಲ್‌ನಲ್ಲಿ ಓದುವ ಸಂಸ್ಕೃತಿಯ ಹೊಸ ಅಧ್ಯಾಯಕ್ಕೆ ಚಾಲನೆ




• ಮಲ್ಲಮ್ಮ ನುಡಿ ವಾರ್ತೆ ಬೀದರ್

ವಟ ಪೂರ್ಣಿಮೆಯ ಪವಿತ್ರ ಸಂದರ್ಭದಲ್ಲಿ, ನಮ್ಮ ಕಿರಿಯ ಮಣಿಕಿಯನ್ಸ್ ಮೊದಲ ಬಾರಿಗೆ ಸ್ಟೋರಿ ಡಿಸ್ಪೆನ್ಸರ್ ಅನ್ನು ಅನುಭವಿಸಿದರು. ಈ ವಿಶೇಷ ಕ್ಷಣವು ಅಧ್ಯಕ್ಷರಾದ ಶ್ರೀ ಆನಂದರಾಜ್ ಮಾಣಿಕ್ ಪ್ರಭು ಅವರ ಸಾನ್ನಿಧ್ಯದಲ್ಲಿ ಹಾಗೂ ಶಾಲೆಯ ಶಿಕ್ಷಕರು ಮತ್ತು ಸಿಬ್ಬಂದಿಯ ಉಪಸ್ಥಿತಿಯಲ್ಲಿ ನೆರವೇರಿತು. ಇದರೊಂದಿಗೆ ಶಾಲೆಯ ಓದುವ ಸಂಸ್ಕೃತಿಯಲ್ಲಿ ಹೊಸ ಅಧ್ಯಾಯ ಆರಂಭವಾಯಿತು.

ಜಪಾನ್‌ನಿಂದ ದಿ ಮಾಣಿಕ್ ಪಬ್ಲಿಕ್ ಸ್ಕೂಲ್‌ಗೆ ತರಲಾಗಿರುವ ಈ ಸ್ಟೋರಿ ಡಿಸ್ಪೆನ್ಸರ್, ಈಗಾಗಲೇ ಸಿಂಗಾಪುರ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ಅನೇಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಓದುವ ಅನುಭವವನ್ನು ಸಮೃದ್ಧಗೊಳಿಸುತ್ತಿದೆ. ಭಾರತದಲ್ಲಿ ಇಂತಹ ಯಂತ್ರಗಳು ಇನ್ನಷ್ಟೇ ಶಾಲೆಗಳಿಗೆ ಪರಿಚಯವಾಗುತ್ತಿರುವ ಸಂದರ್ಭದಲ್ಲಿ, ಇದರ ಆಗಮನವು ವಿದ್ಯಾರ್ಥಿಗಳಲ್ಲಿ ಕುತೂಹಲ ಬೆಳೆಸುವ, ಅರ್ಥಪೂರ್ಣ ಕಲಿಕಾ ಅನುಭವಗಳನ್ನು ಒದಗಿಸುವ ಹಾಗೂ ಓದಿನ ಮೇಲಿನ ಜೀವಮಾನಪರ್ಯಂತದ ಆಸಕ್ತಿಯನ್ನು ಬೆಳೆಸುವ ಶಾಲೆಯ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಕೇವಲ ಒಂದು ಬಟನ್ ಒತ್ತುವುದರ ಮೂಲಕ ವಿದ್ಯಾರ್ಥಿಗಳು ತಮ್ಮ ಇಷ್ಟದ ಪ್ರಕಾರವನ್ನು ಆಯ್ಕೆಮಾಡಬಹುದು. ಕೆಲವೇ ಕ್ಷಣಗಳಲ್ಲಿ ಜೈವಿಕವಾಗಿ ಕರಗುವ (Bio-degradable) ಕಾಗದದ ಮೇಲೆ ಸುಂದರವಾದ



ಕಿರುಕತೆ ಮುದ್ರಿತವಾಗಿ ಅವರ ಕೈ ಸೇರಲಿದೆ. ಈ ವಿನೂತನ ವ್ಯವಸ್ಥೆಯು ಗ್ರಂಥಾಲಯದ ಪ್ರತಿಯೊಂದು ಭೇಟಿಯನ್ನು ಓದಲು, ಕಲ್ಪಿಸಿಕೊಳ್ಳಲು ಮತ್ತು ಹೊಸ ಕಥೆಗಳನ್ನು ಅನ್ವೇಷಿಸಲು ಆಹ್ವಾನವಾಗಿಸುತ್ತದೆ.

ನಮ್ಮ ಗ್ರಂಥಾಲಯಕ್ಕೆ ಈ ಅರ್ಥಪೂರ್ಣ ಕೊಡುಗೆಯನ್ನು 2011-12ನೇ ಬ್ಯಾಚ್ ಸಪ್ರೇಮವಾಗಿ ನೀಡಿದೆ. ತಮ್ಮ ಮಾತೃಶಾಲೆಯೊಂದಿಗೆ ಹೊಂದಿರುವ ಆತ್ಮೀಯ ಬಾಂಧವ್ಯ ಮತ್ತು ಉದಾರ ಮನೋಭಾವಕ್ಕಾಗಿ ನಮ್ಮ ಹಳೆಯ ವಿದ್ಯಾರ್ಥಿಗಳಿಗೆ ನಾವು ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇವೆ. ಅವರ ಈ ಉಡುಗೊರೆ ಕೇವಲ ಒಂದು ಯಂತ್ರವಲ್ಲ; ಮುಂದಿನ ಪೀಳಿಗೆಯ ಮಣಿಕಿಯನ್ಸ್‌ಗಳಲ್ಲಿ ಕಲ್ಪನಾಶಕ್ತಿ, ಓದಿನ ಆಸಕ್ತಿ ಮತ್ತು ಜ್ಞಾನದ ಮೇಲಿನ ಪ್ರೀತಿಯನ್ನು ಬೆಳೆಸುವ ಶಾಶ್ವತ ಪರಂಪರೆಯಾಗಿದೆ.

# ಬಸವಾದಿ ಶರಣರ ಹೆಸರು ಮತ್ತು ಸಾಮರಸ್ಯದ ಹುಡುಕಾಟ



ಸಮತೆ-ಸಹೋದರತೆ
● ಡಾ. ಯಂಕನಗೌಡ ಪಾಟೀಲ್
ಉಪನ್ಯಾಸಕರು, ಕೆಂಭಾವಿ

ನುಡಿದರೆ ಮುತ್ತಿನ ಹಾರದಂತಿರಬೇಕು" ಎಂಬಂತೆ ಮಾತಿನ ಶಕ್ತಿ, ಮಾತಿನ ಮಹತ್ವ, ಮಾತಿನ ಗತ್ತು ಮತ್ತು ಗಾಂಭೀರ್ಯವು ಮನುಷ್ಯನ ವ್ಯಕ್ತಿತ್ವದ ಕನ್ನಡಿಯಾಗಿದೆ. ಮಾತುಗಳೇ ನಮ್ಮ ಬದುಕಿನ ದಿಕ್ಕನ್ನು ಬದಲಿಸುತ್ತವೆ. ಇವು ಸಮಾಜದ ಮೇಲೆ ಹಾಗೂ ನಮ್ಮ ಸುತ್ತಲಿನ ಜನರ ಮೇಲೆ ಆಳವಾದ ಪ್ರಭಾವ ಬೀರುತ್ತವೆ. ಸಕಾರಾತ್ಮಕ ಮಾತುಗಳು ಹೊಸ ಆಲೋಚನೆಗಳನ್ನು ಮತ್ತು ಹೊಸ ಭರವಸೆಯನ್ನು ಹುಟ್ಟುಹಾಕಿದರೆ, ನಕಾರಾತ್ಮಕ ಮಾತುಗಳು ಇರುವ ಸಂಬಂಧಗಳನ್ನೇ ಹಾಳುಮಾಡುತ್ತವೆ. ಅದಕ್ಕಾಗಿಯೇ, "ಮಾತಿನಿಂದಲೇ ನಗೆ, ಮಾತಿನಿಂದಲೇ ಹಗೆ" ಎಂದರು ವಚನ ಪಿತಾಮಹ ಸರ್ವಜ್ಞರು. ನಾವಾಡುವ ಮಾತಿನೊಳಗೆ ಮಾತಿರಬೇಕು, ಮಾತಿನೊಳಗೆ ರೀತಿ-ನೀತಿ ಇರಬೇಕು; "ಮಾತಿನಲ್ಲಿ ಮಾತಿಲ್ಲದವನ ಮೂತಿ ನೋಡಬಾರದು" ಎಂದರು ಬಸವಾದಿ ಶರಣರು. ಮಾತೇ ಮುತ್ತು, ಮಾತೇ ಮೃತ್ಯು, ಮಾತೇ ಮಾಣಿಕ್ಯ, ಮಾತೇ ಜ್ಯೋತಿರ್ಲಿಂಗ!

ಭಾರತೀಯ ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದೆ. ಪ್ರಜಾಪ್ರಭುತ್ವದ ಮೂಲವೇ ಮುಕ್ತ ಮಾತು ಮತ್ತು ಮುಕ್ತ ಚರ್ಚೆ. ಜನರ ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರಶ್ನಿಸುವ ಹಕ್ಕು ಮತ್ತು ಮುಕ್ತ ಸಂವಾದಗಳಿಂದ ಸಮ ಸಮಾಜ, ಆದರ್ಶ ರಾಜ್ಯ, ಸುಖಿ ರಾಜ್ಯ ಹಾಗೂ ಪ್ರಜಾರಾಜ್ಯವನ್ನು ಕಟ್ಟಬಹುದೇ ಹೊರತು; ಕಠೋರವಾಗಿ, ಕಟುವಾಗಿ ಟೀಕಿಸುವ ಭರದಲ್ಲಿ ಅವಾಚ್ಯ ಶಬ್ದಗಳನ್ನು ಪ್ರಯೋಗಿಸಿ, ಪ್ರಚೋದನಕಾರಿ ಭಾಷಣ ಮಾಡುವ ಮೂಲಕ ಪೊಲೀಸ್ ರಾಜ್ಯವನ್ನು ಆಹ್ವಾನಿಸುವುದರಿಂದಲ್ಲ.

ಖ್ಯಾತ ಕವಿ ಚೆನ್ನವೀರ ಕಣವಿಯವರು ನುಡಿದಂತೆ: ನಾವು ಆಡುವ ಮಾತು ಹೀಗಿರಲಿ ಗೆಳೆಯ, ಮೃದು ವಚನ ಮೂಲೋಕ ಗೆಲ್ಲುವುದು ತಿಳಿಯ.

ಮೌನ ಮೊಗ್ಗೆಯೊಡೆದು ಮಾತರಳಿ ಬರಲಿ, ಮೂರು ದಿನದ ಬಾಳು ಘಮಘಮಿಸುತಿರಲಿ. ಎಂಬ ಸದಾಶಯದ ನೆಲೆಯಲ್ಲಿ ನಿಂತು ಸಮಾಜದ ಜಾಗೃತಿಗಾಗಿ ಹಾಗೂ ಪ್ರಜಾಪ್ರಭುತ್ವದ ಉಳಿವಿಗಾಗಿ ಆರೋಗ್ಯಕರ ಚರ್ಚೆಗಳು ನಡೆಯುವುದು ಅತ್ಯಗತ್ಯ.

ಇತ್ತೀಚೆಗೆ ಕನ್ನೇರಿ ಮಠದ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಯವರ ನೇತೃತ್ವದಲ್ಲಿ ಆಯೋಜಿಸುತ್ತಿರುವ 'ಬಸವಾದಿ ಶರಣರ ಹಿಂದೂ ಸಮಾವೇಶ'ಕ್ಕೆ ಪರ-ವಿರೋಧಗಳು ವ್ಯಕ್ತವಾಗುತ್ತಿವೆ. ಮಠಾಧೀಶರ ದ್ವೇಷಪೂರಿತ ಭಾಷಣಗಳು ಮತ್ತು ಪ್ರಗತಿಪರರ ಆಕ್ಷೇಪಣೆಯ ಸುದ್ದಿಗೋಷ್ಠಿಗಳು ಹೀಗೆ ಉಭಯ ಪೀಠಗಳಿಂದ ಬರುವ ಆಕ್ರೋಶಭರಿತ ಮಾತುಗಳನ್ನು ಕೇಳಿದರೆ, ಬಸವಾದಿ ಶರಣರ ತತ್ವ ಸಿದ್ಧಾಂತಗಳನ್ನು ಮೇಲ್ನೋಟಕ್ಕೆ ಗಾಳಿಗೆ ತೂರಿದಂತೆ ಭಾಸವಾಗುತ್ತದೆ. ಬಸವಣ್ಣನವರ ವಚನವಾದ: "ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ" ಎಂಬ ತತ್ವ ಕಳಚಿಬೀಳುತ್ತಿರುವುದನ್ನು ಕಂಡಾಗ, ಡಾ. ರಾಜ್‌ಕುಮಾರ್ ಅಭಿನಯದ 'ಬಹದ್ದೂರ್ ಗಂಡು' ಚಿತ್ರದ : ಚಿ. ಉದಯಶಂಕರ್ ಸಾಹಿತ್ಯದಲ್ಲಿ ಮೂಡಿ ಬಂದಿರುವ ಹಾಡು ಥಟ್ಟನೆ ನೆನಪಾಗುತ್ತದೆ,

"ಎಲ್ಲಾ ಗುಣಗಳು ನಿನ್ನಲ್ಲಿ ಅಡಗಿ ಕಾಳಗ
ಮಾಡುತ್ತಿವೆ,
ಮನ ತುಂಬಿರುವ ಶಾಂತಿಯ ನುಂಗಿ
ಕುಣಿಯಲು ನೋಡುತಿವೆ.
ರೋಷವ ಬಿಡುವೆಯ? ದ್ವೇಷವ
ಮರೆವೆಯ?
ರಕ್ಕಸನ ವಿಷಗಾಳಿಯ ನುಂಗದೆ
ಬದುಕಿ ಎಲ್ಲರ ಉಳಿಸುವೆಯ? ಹೇಳು
ನೀ ಹೇಳು... ಮಾನವನಾಗುವೆಯ ಇಲ್ಲ
ದಾನವನಾಗುವೆಯ?"

ಹಾಗೆಯೇ ರಾಷ್ಟ್ರಕವಿ ಡಿ.ವಿ.ಜಿ ಅವರ ಮಂಕುತಿಮ್ಮನ ಕಗ್ಗದ ಸಾಲುಗಳೂ ಇಲ್ಲಿ ಪ್ರಸ್ತುತವಾಗುತ್ತವೆ:

"ಎದ್ದೆದ್ದು ಬೀಳುತಿಹೆ, ಗುದ್ದಾಡಿ
ಸೋಲುತಿಹೆ,
ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ,
ಉದ್ಧಾರಿಸುವೆನು ಜಗವನೆನ್ನುತಿಹ ಸಖನೆ,
ನಿನ್ನೆದ್ಧಾರವೆಷ್ಟಾಯ್ತೊ? ಮಂಕುತಿಮ್ಮ."

ಮಾತಿನಂತೆಯೇ ಜಗತ್ತನ್ನು ಉದ್ಧಾರ ಮಾಡಲು ಹೊರಟವರ ಜೀವನದಲ್ಲಿ ಏಳು-ಬೀಳು, ಸೋಲು-ಗೆಲುವು ಸಹಜ. ಆದರೆ ಹೋರಾಡಿ ಸೋಲುವುದು, ಅಹಂಕಾರದಿಂದ ಗೆಲ್ಲುವುದು ಇಲ್ಲವೇ ಕೇವಲ ಗದ್ದಲದಿಂದ ಪ್ರಸಿದ್ಧನಾಗಲು ಯತ್ನಿಸುವುದನ್ನು ಬಿಟ್ಟು, "ಮೊದಲು ಅಂತರಂಗವನ್ನು ಶುದ್ಧೀಕರಿಸಿಕೊಳ್ಳಿ" ಎಂಬ ಮಾರ್ಮಿಕ ಪ್ರಶ್ನೆ ಇಂದು ಗಾಳಿಗೆ ತೂರಲ್ಪಟ್ಟಿದೆ.

ಬಸವಾದಿ ಶರಣರ ಹಿಂದೂ ಸಮಾವೇಶ' ನಡೆಸುವವರು, ಪ್ರಗತಿಪರ ಸಂಘಟನೆಗಳು ಹಾಗೂ ಲಿಂಗಾಯತ ಮಹಾಸಭೆಯನ್ನು ಮುನ್ನಡೆಸುವವರು ಸಂಘರ್ಷದ ಹಾದಿ ಹಿಡಿದು ಅನಗತ್ಯ ಚರ್ಚೆಗಳನ್ನು ಹುಟ್ಟುಹಾಕುತ್ತಿದ್ದಾರೆ. ಅವರಲ್ಲಿ ಪ್ರೀತಿ, ವಿಶ್ವಾಸ, ಗೌರವದಿಂದ ಬಸವಣ್ಣನವರ ಆಶಯದಂತೆ ನಡೆದ ಹಾಗೆ ಕಾಣುತ್ತಿಲ್ಲ. "ಲೋಕದ ಡೊಂಕು ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ" ಎಂಬ ಭಕ್ತಿಭಾವ ಅಲ್ಲಿ ಕಾಣಿಸುತ್ತಿಲ್ಲ. ಮನೆಯೊಳಗಣ ಕಿಚ್ಚು ಮನೆಯನ್ನು ಸುಟ್ಟಲ್ಲದೆ ನೆರೆಮನೆಯನ್ನು ಸುಡುವುದೇ?

ಮನಸ್ಸಿನಲ್ಲಿರುವ ಒಳಜಗಳ, ಜಂಭ, ಪ್ರತಿಷ್ಠೆಗಳ ಮಧ್ಯೆ, ಶಾಂತಿ ಮತ್ತು ಆಕ್ರೋಶದ ನಡುವಿನ ಹೋರಾಟದಲ್ಲಿ ಸಂಸ್ಕಾರ, ಸಂಸ್ಕೃತಿ, ಸದ್ಗುಣ, ಆಚಾರ-ವಿಚಾರಗಳು ಹಾಗೂ ಬಸವಾದಿ ಶರಣ-ರ ವಚನ ಸಾಹಿತ್ಯವೇ ಗಾಳಿಗೆ ತೂರಲ್ಪಡುತ್ತಿವೆ. ಟೀಕೆ-ಟಿಪ್ಪಣಿಗಳಿಗೆ ತಕ್ಷಣವೇ ಆವೇಶದಿಂದ ಪ್ರತಿಕ್ರಿಯಿಸುವ ಸಜ್ಜನರು, ಬಸವಾದಿ ಶರಣರ ಅನುಭಾವದ ನೆಲೆಯಲ್ಲಿ ನಿಂತು ಯೋಚಿಸುತ್ತಿಲ್ಲ. "ಇವನ್ಯಾರವ ಇವನ್ಯಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ" ಎಂಬ ಮನೋಧರ್ಮ ಮಾಯವಾಗಿ; "ಇವನು ಯಾರು? ಯಾವ ಜಾತಿ? ಯಾವ ಧರ್ಮ?" ಎಂದು ಭೇದಭಾವದಿಂದ ನೋಡುವ ಪ್ರವೃತ್ತಿ ಹೆಚ್ಚಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ.

ಬಸವಣ್ಣನವರ ವಚನದಂತೆ, ಹೊಯಿದವರೆನ್ನ ಹೊರೆದವರೆಂಬೆ, ಬೈದವರೆನ್ನ ಬಂಧುಗಳೆಂಬೆ ಎಂಬ ಶರಣ ಪರಂಪರೆಯ ಚಿಂತನ ಮಂಥನದಲ್ಲಿ ಮಠಾಧೀಶರು, ಪ್ರಗತಿಪರರು, ಲಿಂಗಾಯತರು, ಬಸವಪ್ರಿಯರು, ಚಿಂತಕರು ಮತ್ತು ರಾಜಕೀಯ ನಾಯಕರು ಕೈಜೋಡಿಸಬೇಕಾಗಿದೆ. ಸಮಾನತೆ ಮತ್ತು ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ಸಮ ಸಮಾಜಕ್ಕಾಗಿ ಹಂಬಲಿಸಿ, ಅನುಭವ ಮಂಟಪ ವನ್ನು ಸ್ಥಾಪಿಸಿ, ಮಾನವೀಯತೆ ಹಾಗೂ ವಿಶ್ವಮಾನವ ಸಂದೇಶವನ್ನು ಜಗತ್ತಿಗೆ ಪರಿಚಯಿಸಿದವರು ಜಗಜ್ಯೋತಿ ಬಸವೇಶ್ವರರು. ವಿಶ್ವದ ಮೊದಲ ಧಾರ್ಮಿಕ ಸಂಸತ್ತನ್ನು ಕಟ್ಟಿದ ಸಾಂಸ್ಕೃತಿಕ ನಾಯಕ ಬಸವಣ್ಣನವರ ಸಾಮರಸ್ಯದ ಬದುಕಿನ ಆದರ್ಶಗಳೊಂದಿಗೆ ನಾವಿಂದು ಸೌಹಾರ್ದತೆಯ ನಾಡನ್ನು ಕಟ್ಟಬೇಕಾಗಿದೆ.

ಬಸವಾದಿ ಶರಣರ ಹಿಂದೂ ಸಮಾವೇಶ'ದ ಹೆಸರಿನಲ್ಲಿ ಪ್ರಗತಿಪರ ಸಂಘಟನೆಗಳು ಹಾಗೂ ಲಿಂಗಾಯತ ಮಹಾಸಭೆಯ ನಡುವೆ ನಡೆಯುತ್ತಿರುವ ಈ ಪರ-ವಿರೋಧದ ಸಂಘರ್ಷ ಮತ್ತು ಇದ-ರಿಂದ ಎದುರಾಗುತ್ತಿರುವ ತವಕ-ತಲ್ಲಣಗಳಿಗೆ ಅಂತ್ಯ ಹಾಡುವವರು ಯಾರು ಎಂಬ ಯಕ್ಷಪ್ರಶ್ನೆ ಇಂದು ಸಾಮಾನ್ಯ ಜನರನ್ನು ಕಾಡುತ್ತಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200222

PRGI NO. 120927
(RNINO:KARKAN/2011/48371)